# ವ್ಯಕ್ತಿಚಿತ್ರ - ಡಾ. ಗದ್ದಗಿಮಠ

## ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಸ ಗ್ರಂಥಮಾಲೆ ಅತ್ಯಂತ ಮುಖ್ಯವು, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿ ಏಳು ಜಿಲ್ಲೆಗಳಲ್ಲಿ ಉಪನ್ಯಾಸ ಶಿಬಿರಗಳನ್ನು ಏಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಸರಣಿಯಲ್ಲಿ ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ನಮ್ಮ ಪ್ರಯತ್ನಕ್ಕೆ ನಿರೀಕ್ಷೆಗೆ ಮೀರಿದ ಮೆಚ್ಚುಗೆಯೂ, ಪ್ರೋತ್ಸಾಹವೂ ದೊರೆಯುತ್ತಿದೆ. ಜನರು ತಾವಾಗಿಯೇ ಮುಂದು ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು 'ವಿಶ್ವವಿದ್ಯಾಲಯಕ್ಕೆ' ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿ ತಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೫೨೭ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಜನಪ್ರಿಯತೆಯನ್ನು ವ್ಯಕ್ತಗೊಳಿಸುತ್ತದೆ. ನಾನು ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

**ಡಾ.ಎ. ಮುರಿಗೆಪ್ಪ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

# ಲೇಖನಗಳು:

ಡಾ. ಗದ್ದಗಿಮಠ ಅವರು ಹಲವಾರು ಅನುಭವಪೂರ್ಣ ವಿಮರ್ಶಾತ್ಮಕ ಈ ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಲೇಖನಗಳನ್ನು ಮಾತ್ರ ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾಲಯ ಸಮಗ್ರ ಲೇಖನಗಳ ಸಂಪುಟವನ್ನು ಪ್ರಕಟಿಸಿದ್ದು ಒಬ್ಬ ಧೀಮಂತ ಸಾಹಿತಿಗಳಿಗೆ ಕೊಡಬೇಕಾಗಿರುವ ಗೌರವಸೂಚನೆಯ ದ್ಯೋತಕವಾಗಿರುತ್ತದೆ. ಇಂತಹ ಕಾರ್ಯ ನಿಜವಾಗಿಯೂ ಸ್ತುತ್ಯಾರ್ಹವಾದುದು. ಅಲ್ಲದೆ ಇನ್ನೂ ಹಲವಾರು ಲೇಖನಗಳು ಅಪ್ರಕಟವಾಗಿಯೇ ಉಳಿದಿರುತ್ತವೆ. ಅವು ಈ ಕೆಳಗಿನಂತಿವೆ.

೧. ನತ್ತು ಮತ್ತು ಮೂಗುತಿ .

೨. ಜಾನಪದ ಭಾವಗೀತೆಗಳು.

೩. ಶಿಶುನಾಳ ಶರೀಫರು.

೪. ಬಾಡುಗಳ್ಳ ಬ್ರಾಹ್ಮಣರು.

೫. ಅಳಿದುಳಿದ ಪುಲಿಗೆರೆ-ಐತಿಹಾಸಿಕ ಲೇಖನ.

೬. ಕರ್ನಾಟಕ ಜನಪದ ಕಲೆ-ಕಲಾತ್ಮಕವಾದ ಲೇಖನ.

೭. ಕನ್ನಡ ಲಾಲಿ ಜೋಗಳಗಳು-ಸುಪ್ರಸಿದ್ಧ ಲೇಖನ.

೮. ಶಿರಿಯಾಳ ಚಂಗಳೆ-ಗಮನಾರ್ಹ ಲೇಖನ.

೯. ಕನ್ನಡ ಬಯಲಾಟ-ಅತ್ಯುತ್ತಮ ಲೇಖನ.

೧೦. ಅನುಭವ ಸಾಹಿತ್ಯ-ಆಧ್ಯಾತ್ಮಿಕ ಲೇಖನ.

೧೧. ಕನ್ನಡ ಹಾಡುಗಬ್ಬಗಳು- ಪ್ರಮುಖವಾದ ಲೇಖನ.

೧೨. ಮಲೆನಾಡಿನ ಹಾಡುಗಳು-ಮಹತ್ವದ ಲೇಖನ.

೧೩. ದುರಗಮುರಗಿಯವರು-ಅಪೂರ್ವ ಲೇಖನ.

೧೪.ಗೊಂದಲಿಗರು-ವಿಚಾರಪೂರ್ಣ ಲೇಖನ.

ಅಲ್ಲದೇ ಅನೇಕ ಬಿಡಿಹಾಡುಗಳನ್ನು ಸಂಗ್ರಹಸಿದ್ದಾರೆ. ಇವೆಲ್ಲವುಗಳು ಪ್ರಕಟಣೆಗಾಗಿ ಸಿದ್ಧಗೊಂಡಿರುತ್ತವೆ. ಉದಾರಭಾವವುಳ್ಳವರಾದ ಪ್ರಕಟಣೆಕಾರರು ಇವುಗಳನ್ನು ಸಾಹಿತ್ಯಭಿಮಾನದಿಂದ ಕೈಗೆತ್ತಿಕೊಂಡು ಪ್ರಕಟಣೆಗೈದು ಅಳಿದು ಹೋಗದಂತೆ ಶಾಶ್ವತವಾಗಿ ಉಳಿಯುವಂತೆ ಮಾಡಬೇಕಾಗಿರುವುದು ಅತ್ಯವಶ್ಯ.

ಡಾ. ಗದ್ದಗಿಮಠ ಅವರು The Kayaka system of education ಎಂಬ ಲೇಖನವನ್ನು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಈ ಲೇಖನವು Studies in educAtion & culture in honour of Dr. D.C. Pawate Daimond Jublee celebration on 7the nov, 1959 ಪತ್ರಿಕೆಯಲ್ಲಿ ಪ್ರಕಟವಾಗಿದೆ. ಜಾನಪದ ಸಾಹಿತ್ಯಾವಲೋಕನ ಎಂಬ ಇನ್ನೊಂದು ಲೇಖನವು ೧೯೫೮ ಏಪ್ರಿಲ್೨೨ ರ ಸಂಯುಕ್ತ ಕರ್ನಾಟಕ ಪತ್ರಿಕೆಯ ರಜತ ಮಹೋತ್ಸವ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅನುಭವ ಸಾಹಿತ್ಯ ಲೇಖನವು ಪ್ರಬುದ್ಧ ಕರ್ನಾಟಕ ಪತ್ರಿಕೆ (೪೨-೩) ಯಲ್ಲಿ ಪ್ರಕಟವಾಗಿದೆ. ಬದಾಮಿ ಗುಹೆಗಳ ಬಗ್ಗೆಯೂ ಲೇಖನ ಬರೆದಿದ್ದಾರೆ. ಕರ್ನಾಟಕದ ದುರಗ ಮುರಗಿಯವರು ಈ ಲೇಖನವು ಧಾರವಾಡದ ಜೀವನ ಶಿಕ್ಷಣ ಮಾಸಪತ್ರಿಕೆಯಲ್ಲಿ ಬೆಳಕು ಕಂಡಿದೆ. ಕನ್ನಡದ ಲಾಲಿಜೋಗುಳಗಳು ಲೇಖನವು ಕರ್ಮವೀರ ಪತ್ರಿಕೆಯ ೧೯೬೦ ರ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗಿದೆ. ಹಂಪೆಯ ಹರೀಹರನ ಷಟ್ಪದಿಕಾವ್ಯ ಎಂಬ ಲೇಖನವು ಶರಣ ಸಾಹಿತ್ಯ ೨೧-೪ ಸಂಚಿಕೆಯಲ್ಲಿ ಮತ್ತು ಜಯಕರ್ನಾಟಕ ಪತ್ರಿಕೆಯ ೨೬-೮೦ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಕರ್ನಾಟಕದ ಗೊಂದಲಿಗರು ಲೇಖನವು ಜಯಕರ್ನಾಟಕ ಪತ್ರಿಕೆಯ ೩೩-೯ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಈ ಮೊದಲಾದ ಲೇಖನಗಳೊಂದಿಗೆ ಒಟ್ಟು ೬೩ ಕವನಗಳನ್ನು ಗದ್ದಗಿಮಠ ಅವರು ರಚಿಸಿದ್ದಾರೆ. ಈ ೬೩ ಕವನಗಳು ಕರ್ನಾಟಕ ವಿಶ್ವವಿದ್ಯಾಲಯದ ಮೆನುಸ್ಕ್ರಿಪ್ಟ ೧೧೪೭ ಪುಟಸಂಖ್ಯೆ ೨೦೦೪ ಎಕ್ಸರ್ ಸೈಜ್‌ನಲ್ಲಿರುತ್ತವೆ.

## ಪ್ರಾಸ್ತಾವಿಕ – ಪೀಠಿಕೆ:

ಜಾನಪದ ಸಾಹಿತ್ಯದ ವಿಶ್ವಕೋಶದಂತಿರುವ ಡಾ. ಬಸಯ್ಯ ಸಾವಳಿಗಯ್ಯ ಗದ್ದಗಿಮಟ ಅವರು ಜಾನಪದ ಸಾಹಿತ್ಯದ ಸಂಶೋಧನೆಗೆ ನಾಂದಿ ಹಾಡಿದರು. ಕನ್ನಡದಲ್ಲಿ ಪ್ರಪ್ರಥಮವಾಗಿ ಜಾನಪದ ವಿಷಯದಲ್ಲಿ ಮಹಾಪ್ರಬಂಧವನ್ನು ರಚಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೫೪ ರಲ್ಲಿ ಪಿಎಚ್.ಡಿ. ಪದವಿ ಪಡೆದು 'ಜಾನಪದ ಹರಿಕಾರ'ರೆನಿಸಿದರು. ನಿರಂತರವಾಗಿ ಸಂಶೋಧನೆಯಲ್ಲಿ ತಲ್ಲೀನರಾಗಿ ಜಾನಪದ ಕ್ಷೇತ್ರಕ್ಕೆ ವಿದ್ವತ್ತಿನ ಹೊಂಬಳೆಯನ್ನು ತೊಡಿಸಿದ ಕೀರ್ತಿಶಾಲಿಗಳು. ಕರ್ನಾಟಕ ಜಾನಪದ ಅಧ್ಯಯನಕ್ಕೆ ಮೌಲಿಕವಾದ ಕೊಡುಗೆಗಳನ್ನು ಕೊಟ್ಟವರಲ್ಲಿ ಡಾ. ಬಿ.ಎಸ್. ಗದ್ದಗಿಮಠ ಅವರ ಹೆಸರು ಪ್ರಮುಖವಾದುದು. ಡಾ. ಭೂಸನೂರಮಠ ಮತ್ತು ಎಸ್.ಎಸ್. ಮಾಳವಾಡ ಅವರು ಜಾನಪದ ಸಾಹಿತ್ಯ (Folk-lore) ಸಾಹಿತ್ಯವೆ? ಎಂದು ಗೇಲಿ ಮಾಡುತ್ತಿರುವ ವಾತಾವರಣದಲ್ಲಿ ಜಾನಪದ ಸಾಹಿತ್ಯವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿಮರ್ಶೆಗೈದರು. ಅಪಾರವಾದ ಸಾಹಿತ್ಯವನ್ನು ಗ್ರಂಥರೂಪದಲ್ಲಿ ಕಾಣಿಕೆಯಾಗಿ ಸಲ್ಲಿಸಿದ ಮೊದಲಿಗರು.

ಸಾಹಿತ್ಯ ಕ್ಷೇತ್ರದಲ್ಲಿ ಸ್ವಾತಂತ್ರ್ಯಪೂರ್ವ ಜಾನಪದ ವಿದ್ವಾಂಸರಲ್ಲಿ ಪೂರ್ಣಕಾಲದ ವಿದ್ವಾಂಸರೆಂದು ಗುರುತಿಸಬಲ್ಲವರು ತುಂಬಾ ವಿರಳ. ಕನ್ನಡ ಸಾಹಿತ್ಯ ಕ್ಷಿತಿಜದಲ್ಲಿ ಪ್ರಧಾನವಾದ ಸಾಧನೆಯನ್ನು ತೋರುತ್ತಾ ಜಾನಪದದಲ್ಲಿಯು ಆಸಕ್ತಿಯನ್ನು ಉಳಿಸಿಕೊಂಡವರೆ ಹೆಚ್ಚು. ಅದರಲ್ಲೂ ನವೋದಯದ ಎಲ್ಲ ಸಂಗ್ರಹಕಾರರು ಒಂದರಡು ಸಂಕಲನಗಳನ್ನು ಜಾನಪದ ವಿಮರ್ಶಾ ಗ್ರಂಥಗಳನ್ನು ಮಾತ್ರ ನೀಡಲು ಸಾಧ್ಯವಾಗಿದೆ. ಸ್ವಾತಂತ್ರ್ಯೋತ್ತರ ದಿನಗಳ ಜಾನಪದ ಅಧ್ಯಯನಕ್ಕೆ ಒಳ್ಳೆಯ ಆರಂಭವನ್ನು ಒದಗಿಸಿದ ಖ್ಯಾತ ಪ್ರಪ್ರತಮ ಜಾನಪದ ವಿದ್ವಾಂಸರು ಡಾ. ಬಿ.ಎಸ್. ಗದ್ದಗಿಮಠ ಅವರು.

೧೯೫೦ರ ಅವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜಾನಪದ ಸಾಹಿತ್ಯದಲ್ಲಿ ಸಂಶೋಧನೆಯನ್ನು ಕೈಕೊಂಡು ಡಾಕ್ಟರೇಟ್‌ಪದವಿ ಪಡೆದ ಭಾರತೀಯ ವಿದ್ವಾಂಸರಲ್ಲಿ ಮೊದಲಿಗರು. ಇವರ ಪ್ರಾಮಾಣಿಕ ಪ್ರಯತ್ನದ ಫಲದ ದ್ಯೋತಕವಾಗಿ ವಿಶ್ವವಿದ್ಯಾಲಯವು ಕರ್ನಾಟಕ ಜಾನಪದವನ್ನು ಒಂದು ಮೌಲಿಕವಾದ ಅಧ್ಯಯನದ ವಿಷಯವೆಂದು ಗುರುತಿಸಲು ಪ್ರಪ್ರಥಮಬಾರಿಗೆ ಸಾಧ್ಯವಾಯಿತು. ಈವರೆಗೆ ಕನ್ನಡದಲ್ಲಿ ಕಾರ್ಯನಿರತರಾದ ವಿದ್ವಾಂಸರು ಯಾರೂ ಈ ನಿಟ್ಟಿನಲ್ಲಿ ಯೋಚಿಸಿರಲಿಲ್ಲ.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ೧೯೫೦ ರಿಂದ ೧೯೬೦ ರ ಅವಧಿಯಲ್ಲಿ ಡಾ. ಬಿ.ಎಸ್. ಗದ್ದಗಿಮಠ ಅವರಷ್ಟು ವ್ಯಾಪಕವಾಗಿ ಕ್ಷೇತ್ರಕಾರ್ಯ ಮಾಡಿದವರು ಮತ್ತೊಬ್ಬರಿರಲಿಲ್ಲ. ತಮ್ಮ ಸಮಸ್ತ ಜೀವನವನ್ನು ಜಾನಪದ ಕ್ಷೇತ್ರಕಾರ್ಯದ ನಿಮಿತ್ತ ಮೀಸಲಾಗಿರಿಸಿದರು. ಈ

ಸಂದರ್ಭದಲ್ಲಿ ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಿ ಉತ್ತರ ಕರ್ನಾಟಕದ ಹಾಗೂ ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಲೆದಾಡಿ ವಿಪುಲವಾದ ಸಾಹಿತ್ಯವನ್ನು ಸಂಗ್ರಹಿಸಿದರು. ಅದನ್ನು ವಿಶ್ಲೇಷಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡರು. ಜೊತೆಗೆ ತಮ್ಮ ಶ್ರೀಮತಿಯವರನ್ನು ಕರೆದುಕೊಂಡು ಎತ್ತಿನ ಗಾಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಅನೇಕ ರೂಪದ ಗೀತೆಗಳನ್ನು ಹಾಡಿ ವ್ಯಾಖ್ಯಾನಿಸಿ ಜಾನಪದ ಸಾಹಿತ್ಯದ ಪ್ರಚಾರ ಕಾರ್ಯವನ್ನು ಕೈಗೊಂಡರು. ಇಂಥ ಮೇಧಾವಿಗಳೆನಿಸಿದ್ದ ಡಾ. ಗದ್ದಿಗಿಮಠ ಅವರು ನಡುವಯಸ್ಸಿನಲ್ಲಿ ಅಕಾಲಿಕ ಮರಣಕ್ಕೆ ತುತ್ತಾಗಿರುವುದರಿಂದ ಜಾನಪದ ಸಾಹಿತ್ಯ ಕ್ಷೇತ್ರವು ತುಂಬಲಾರದ ನಷ್ಟಕ್ಕೀಡಾಗಿದೆ.

ಡಾ. ಗದ್ದಿಗಿಮಠ ಅವರು ಉತ್ತರ ಕರ್ನಾಟಕದ ಜಾನಪದ ಸಾಹಿತ್ಯದ ಪ್ರಕಾರಗಳ ಮೇಲೆ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಗಣ್ಯ ವಿದ್ವಾಂಸರು. ಎಲ್ಲ ಜನಪದ ಸಂಪ್ರದಾಯಗಳನ್ನು ಆಳವಾಗಿ ಅಧ್ಯಯನಗೈದಿರುವರೆಂಬುದಕ್ಕೆ ಅವರ ಪಿಎಚ್.ಡಿ. ಮಹಾಪ್ರಬಂಧ ನಿದರ್ಶನವಾಗಿದೆ. ಜಾನಪದ ಸಾಹಿತ್ಯದ ಸಂಕಲನಗಳಿಗೆ ವಿದ್ವತ್‌ಪೂರ್ಣವಾದ ಪ್ರಸ್ತಾವನೆಗಳನ್ನು ಬರೆಯುವುದರ ಮೂಲಕ ಅವುಗಳಿಗೆ ಒಂದು ವೈಜ್ಞಾನಿಕ ಸ್ವರೂಪವನ್ನು ತಂದುಕೊಟ್ಟಿರುವರು. ಅವರ ಕಂಬಿಯ ಪದಗಳು, ಮಲ್ಲಮಲ್ಲಾಣಿ, ಜನತಾಗೀತೆಗಳು, ಲೋಕಗೀತೆಗಳು, ಕುಮಾರ ರಾಮನ ದುಂದುಮೆ, ನಾಲ್ಕು ನಾಡಪದಗಳು ಈ ಮೊದಲಾದ ಕೃತಿಗಳು ಈ ದೃಷ್ಟಿಯಿಂದ ಪ್ರಮುಖವೆನಿಸುತ್ತವೆ.

ಡಾ. ಬಿ.ಎಸ್. ಗದ್ದಿಗಿಮಠ ಅವರು ಕೇವಲ ಸಾಹಿತ್ಯ ಸಂಗ್ರಹಕಾರರಷ್ಟೇ ಅಲ್ಲ, ಹಲವಾರು ಸಂಶೋಧನಾ ಪ್ರಬಂಧಗಳನ್ನು ಬರೆದಿದ್ದಾರೆ. ಅವರ ಅನೇಕ ಪ್ರಬಂಧಗಳು ಅಪ್ರಕಟಿತವಾಗಿಯೇ ಉಳಿದಿರುತ್ತವೆ. ದೀರ್ಘವಾದ ಕ್ಷೇತ್ರಾನುಭವದಿಂದ ಹಾಗೂ ವಿದ್ವತ್ತಿನ ಪ್ರಖರತೆಯಿಂದ ಮೆರಗು ಪಡೆದ ಡಾ. ಗದ್ದಿಗಿಮಟ ಅವರ ಪ್ರಬಂಧಗಳನ್ನು ಒಟ್ಟುಗೂಡಿಸಿ 'ಗದ್ದಗಿಮಠದ ಬರಹಗಳು' ಎಂಬ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದವರು ಪ್ರಕಟಿಸಿದ್ದಾರೆ. ಜನಪದ ಸಂಪ್ರದಾಯ, ಜನಪದ ಸಾಹಿತ್ಯ, ದೊಡ್ಡಾಟ ಮುಂತಾದ ಜನಪದ ರಂಗಪ್ರಕಾರಗಳ ಮೇಲೆ ಡಾ. ಗದ್ದಿಗಿಮಠ ಅವರು ಅಗಾಧವಾದ ಅನುಭವವನ್ನು ಹೊಂದಿದ್ದಾರೆಂಬುದಕ್ಕೆ ಈ ಪ್ರಬಂಧಗಳು ಸಾಕ್ಷಿಯಾಗಿವೆ.

**ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿಯು ಅಮೂಲ್ಯ ಸೇವೆ ಸಲ್ಲಿಸಿದ ಡಾ. ಬಿ.ಎಸ್. ಗದ್ದಿಗಿಮಠ ಅವರ ಜೀವನ ಚರಿತ್ರೆ ಅಂದರೆ ಜಾನಪದ ಸಾಹಿತ್ಯದ ಚರಿತ್ರೆಯ ಅಧ್ಯಯನವೆ ಆಗಿದೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಉಕ್ತಿಯಂತೆ ಅವರು ಬದುಕಿದ ಅವಧಿ ಚಿಕ್ಕದಾಗಿದ್ದರೂ ಕೂಡ ಗೈದ ಸಾಧನೆ ಘನವಾದುದು. ಅಜರಾಮರವಾಗಿ ಉಳಿಯುವಂಥದು. ಮುಂಬರುವ ಸಂಶೋಧಕರಿಗೆ ಸ್ಫೂರ್ತಿದಾಯಕವಾದ ಮಾದರಿ ಬದುಕು** ಬದುಕಿದ ಘನ ವ್ಯಕ್ತಿತ್ವ ಡಾ. ಗದ್ದಿಗಿಮಠ ಅವರದು.

ಡಾ. ಬಿ.ಎಸ್. ಗದ್ದಿಗಿಮಠ ಅವರು ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವರು. ಬಾಗಲಕೋಟೆಯ ಬಸವೇಶ್ವರ ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಕರಾಗಿ, ಬಿಜಾಪುರ ಹೈಸ್ಕೂಲಿನಲ್ಲಿ ಅರ್ಧಮಾಗದಿ ಮತ್ತು ಕನ್ನಡ ವಿಭಾಗದ ಶಿಕ್ಷಕರಾಗಿ, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯದಲ್ಲಿ ಅರ್ಧಮಾಗದಿ ಮತ್ತು ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿರುವರು. ಬಸಯ್ಯನವರ ತಂದೆಯವರಾದ ಸವಳಿಗಯ್ಯನವರು ಅನೇಕ ಶಿವಶರಣರ ಹಂತಿಯ ಹಾಡುಗಳನ್ನು ಹಾಡುತ್ತಿದ್ದರು. ಈ ಹಾಡುಗಳು ತಮ್ಮ ಮನಸ್ಸನ್ನು ಸೆಳೆದು ಸೂರೆಗೊಳ್ಳುವಂತೆ ಪ್ರಭಾವ ಬೀರಿದ್ದರಿಂದ ಅವುಗಳನ್ನು ಕೋಚೆತ್ತಿ ಹಾಡುವುದನ್ನು ತಮ್ಮ ತಂದೆಯವರಿಂದ ಕಲಿತು ಹಾಡಲಾರಂಬಿಸಿದರು. ಚಿಕ್ಕವಯಸ್ಸಿನಲ್ಲಿ ಜಾನಪದ ಸಾಹಿತ್ಯವು ಬಸಯ್ಯನವರ ಮನಸ್ಸನ್ನು ಸೆರೆಹಿಡಿದಿರುವುದರಿಂದ ಅವುಗಳಿಗೆ ಮರುಳಾಗಿ ಹೈಸ್ಕೂಲಿನಲ್ಲಿ ಓದುತ್ತಿರುವಾಗಲೇ ಜಾನಪದ ಹಾಡುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತಮ್ಮನ್ನು ತಾವೇ ಸ್ವತಃ ತೊಡಗಿಸಿಕೊಂಡರು. ಅಲ್ಲದೇ ಹಲಸಂಗಿ ಗೆಳೆಯರ ಗುಂಪಿನ ಕಾರ್ಯ ಚಟುವಟಿಕೆಗಳು ಬಸಯ್ಯನವರಿಗೆ ತುಂಬಾ ಪ್ರೇರಣೆಯನ್ನುಂಟು ಮಾಡಿದವು.

ತಾವು ವಿದ್ಯೆಗಳಿಸಿದ ಬಾಗಲಕೋಟೆಯ ಬಸವೇಶ್ವರ ಮಾಧ್ಯಮಿಕ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುವ ಅಪೂರ್ವ ಅವಕಾಶ ಲಭಿಸಿರುವದು ಬಸಯ್ಯನವರಿಗೆ ತುಂಬಾ ಹೆಮ್ಮೆಯನ್ನುಂಟು ಮಾಡಿತ್ತು. ಆ ವೇಳೆಯಲ್ಲಿ ತಮ್ಮ ಧ್ಯೇಯ ಸಾಧನೆಗಾಗಿ ಐಹೊಳೆ,

ಪಟ್ಟದಕಲ್ಲು, ಬದಾಮಿ, ಬಿಜಾಪುರಗಳಲ್ಲಿಯ ಶಿಲ್ಪಕಲೆಗಳ ಬಗ್ಗೆ ಅಧ್ಯಯನ ಆರಂಭಿಸಿ ಮಾಹಿತಿಯನ್ನು ಸಂಗ್ರಹಿಸತೊಡಗಿದರು. ಹಸಿವು ನೀರಡಿಕೆಗಳನ್ನು ಗಣಿಸದೆ ಜ್ಞಾನತೃಷೆಯಲ್ಲಿ ತಲ್ಲೀನರಾದರು.

ದೈಹಿಕ ಶಿಕ್ಷಣದಲ್ಲಿ ವಿಶೇಷ ತರಬೇತಿ ಪಡೆಯುವ ನಿಮಿತ್ತ ಬಸವೇಶ್ವರ ಹೈಸ್ಕೂಲಿನ ಆಡಳಿತ ಮಂಡಳಿಯವರು ಬಸಯ್ಯನವರನ್ನು ಮುಂಬೈ (ಖಾಂದೇವಾಲಿ)ಗೆ ಕಳುಹಿಸಿಕೊಟ್ಟರು. ಈ ಸಂಸ್ಥೆಯವರೇ ಧನಸಹಾಯದ ವ್ಯವಸ್ಥೆಯನ್ನು ಕೊಡುವದಾಗಿ ಒಪ್ಪಿಕೊಂಡಿದ್ದರು. ಮೊದಲನೆಯ ಕಂತಿನ ಹಣ ಮುಗಿಯುವಷ್ಟರಲ್ಲಿ ಸಂಘದೊಂದಿಗೆ ಮನಸ್ತಾಪವುಂಟಾಗಿದ್ದರಿಂದ ಗದ್ದಗಿಮಠ ಅವರು ಆ ಧನಸಹಾಯವನ್ನು ದಿಟ್ಟತನದಿಂದ ತಿರಸ್ಕರಿಸಿ ಪಣ ಪಡೆದ ಸಂಘಕ್ಕೆ ತಕ್ಷಣವೆ ಎಲ್ಲ ಹಣವನ್ನು ಮರುಪಾವತಿ ಮಾಡಿದರು. ಅತ್ಯಂತ ನಿಷ್ಠುರ ಸ್ವಭಾವದವರಾದ ಬಸಯ್ಯನವರು ಯಾರಿಗೂ ತಲೆಬಾಗದ 'ಛಲದಂಕ ಮಲ್ಲ'ರಂತಹ ವ್ಯಕ್ತಿತ್ವವುಳ್ಳವರಾಗಿದ್ದರು. ಕೊನೆಗೆ ಬಸವೇಶ್ವರ ಹೈಸ್ಕೂಲಿನ ಶಿಕ್ಷಕ ವೃತ್ತಿಗೆ ರಾಜೀನಾಮೆ ಕೊಟ್ಟು ಸ್ವಗ್ರಾಮಕ್ಕೆ ತೆರಳಿದರು.

'ಕಾಯಕವೇ ಕೈಲಾಸ' ಎನ್ನುವಂತೆ ಹುಟ್ಟೂರಿನಲ್ಲಿ ಕೃಷಿಕಾರ್ಯ ಕೈಕೊಂಡು ಅತ್ಯುತ್ತಮ ಫಸಲು ಬೆಳೆದು "ಪ್ರಗತಿಪರ ಆದರ್ಶ ರೈತ"ರೆಂದು ಖ್ಯಾತಿಗಳಿಸಿ ಪ್ರಶಸ್ತಿ ಸಹಿತ ಬಹುಮಾನ ಗಿಟ್ಟಿಸಿಕೊಂಡರು. ಕೆಲದಿನಗಳ ನಂತರ ಬಿಜಾಪುರದ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸತೊಡಗಿದರು. ಶ್ರದ್ಧೆ ಮತ್ತು ನಿಷ್ಠೆಯಿಂದ ಕಾರ್ಯನಿರತರಾದ ಬಸಯ್ಯನವರು ಆಡಳಿತ ವರ್ಗದವರಿಗೆ ಸಹಜವಾಗಿಯೆ ಅಚ್ಚುಮೆಚ್ಚಿನವರಾದರು. ನಂತರ ಎಂ.ಎ. ಅಧ್ಯಯನ ಕೈಕೊಳ್ಳಬೇಕೆಂಬ ಉತ್ಕಟೇಚ್ಛೆಯಿಂದ ಕೊಲ್ಲಾಪುರದ ರಾಜಾರಾಮ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಆರಂಭಿಸಿ ಎಂ.ಎ. ಪರೀಕ್ಷೆಯಲ್ಲಿ ಅತ್ಯುತ್ತಮ ರೀತಿಯಲ್ಲಿ ತೇರ್ಗಡೆಯಾದರು.

ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಾಲೇಜ ಬೆಳಗಾಂವಿಯಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾಗಿ ಸೇವೆ ಆರಂಭಿಸಿದರು. ಆ ಸಂದರ್ಭದಲ್ಲಿ ಕೆ.ಎಲ್.ಇ. ಸಂಸ್ಥೆಯವರೊಂದಿಗೆ ಕೆಲ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿರುವುದರಿಂದ ರಾಜೀನಾಮೆಯಿತ್ತು ಸ್ವಗ್ರಾಮಕ್ಕೆ ಪ್ರಯಾಣ ಬೆಳೆಸಿದರು. ಖ್ಯಾತ ಕನ್ನಡ ಪಂಡಿತರಾದ ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನದಲ್ಲಿ ನಿರತರಾದರು. ಪ್ರೊ. ಕುಂದಣಗಾರ ಅವರ ಮಾರ್ಗದರ್ಶನದಿಂದ ಅವರ ಬಾಳಿಗೆ ಕುಂದಣವಿಟ್ಟಂತಾಯಿತು. ಕೆ.ಜಿ. ಕುಂದಣಗಾರ ಅವರ ವಿಶಿಷ್ಟ ವ್ಯಕ್ತಿತ್ವ, ಕರ್ತವ್ಯ ನಿಷ್ಠೆ, ಮಾರ್ಗದರ್ಶನಗಳಿಂದ ಪ್ರಭಾವಿತರಾಗಿ "ಕನ್ನಡ ಜಾನಪದ ಗೀತೆಗಳು" ವಿಷಯ ಕುರಿತು ಸಂಶೋಧನೆ ಮಹಾಪ್ರಬಂಧವನ್ನು ಅರ್ಪಿಸಿ ಜನಪದ ಸಾಹಿತ್ಯದ ಪ್ರಥಮ ಪಿಎಚ್.ಡಿ. ಪದವೀಧರರೆಂಬ ಕೀರ್ತಿಗೆ ಭಾಜನರಾದರು. ನಂತರ ಸಂಶೋಧನಾ ಕ್ಷೇತ್ರದಲ್ಲಿ ಅವರ ದಾಹ ಮೊಗೆದಷ್ಟು ವರ್ಧಿಸಲಾರಂಭಿಸಿತು.

ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಬಗ್ಗೆ ಸಂಶೋಧನೆ ನಡೆಸುವ ಉತ್ಕಟ ಅಭಿಲಾಷೆಯಿಂದ ಲಕ್ಷ್ಮೇಶ್ವರಕ್ಕೆ ಗದ್ದಗಿಮಠ ಅವರು ಪ್ರಯಾಣ ಬೆಳೆಸಿದಾಗ ಆಲೂರಿನ ಶ್ರೀಮಾನ್‌ತಟ್ಟಿಯವರು ಇವರ ಸಂಶೋಧನಾ ಶಕ್ತಿಯನ್ನು ಗುರುತಿಸಿ ಕ್ರಿ.ಶ. ೧೯೫೫ ರಲ್ಲಿ ಉಮಾ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರನ್ನಾಗಿ ನೇಮಣೂಕಿ ಮಾಡಿಕೊಂಡು ಗದ್ದಗಿಮಠ ಅವರ ಬಗೆಗಿದ್ದ ತಮ್ಮ ಮೆಚ್ಚುಗೆಯನ್ನು ಅಭಿಮಾನವನ್ನು ವ್ಯಕ್ತಪಡಿಸಿ ಸಂಶೋಧನಾ ಕಾರ್ಯದಲ್ಲಿಯು ಸಹಕಾರ ನೀಡಿ ಹುರಿದುಂಬಿಸಿದರು. ಲಕ್ಷ್ಮೇಶ್ವರದ ಐತಿಹಾಸಿಕ ಮಂದಿರ ಮಠಗಳ ಬಗ್ಗೆ ಆಳವಾಗಿ ಅಧ್ಯಯನಗೈಯುತ್ತ ಹಲವಾರು ಸಂಶೋಧನಾತ್ಮಕ ಲೇಖನಗಳನ್ನು ರಚಿಸಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟಪಡಿಸಿದರು . ಜೊತೆಗೆ ಹೈಸ್ಕೂಲಿನ ಸರ್ವತೋಮುಖ ಪ್ರಗತಿಗೆ ಹೆಣಗಾಡಿ ಆದರ್ಶ ಶಿಕ್ಷಕ, ಆದರ್ಶ ಆಡಳಿತಗಾರರೆಂದು ಜನಪ್ರಿಯತೆಗಳಿಸಿದರು. ಲಕ್ಷ್ಮೇಶ್ವರದ ಲಕ್ಷ್ಮೀಲಿಂಗನಗುಡಿ, ಸೋಮೇಶ್ವರ ಗುಡಿ, ಮಹಂತನ ಮಠ, ಕಲ್ಲುಮಠ, ಜೈನಬಸದಿ, ಜುಮ್ಮಾ ಮಸೀದಿ, ಹಾಗೂ ತೀರ್ಥಗಳನ್ನು ಅಭ್ಯಾಸ ಮಾಡಿ 'ಆಳಿದುಳಿದ ಪುಲಿಗೇರಿ' ಎಂಬ ಸಂಶೋಧನಾತ್ಮಕ ಪ್ರಬಂಧವನ್ನು ಬರೆದರು. ಅಲ್ಲದೆ ತಮ್ಮ ವಿದ್ಯಾರ್ಥಿಗಳಲ್ಲಿಯೂ ಸಂಶೋಧನಾಭಿರುಚಿಯನ್ನು ಮೂಡಿಸಿದರು. ಇವರ ದಕ್ಷ ಆಡಳಿತಕ್ಕೆ ಹಾಗೂ ವಿದ್ವತ್ತಿಗೆ ಮತ್ಸರ ಪಡಲಾರಂಭಿಸಿದ ಕೆಲವರು ಗದ್ದಗಿಮಠ ಅವರಿಗೆ ಕಿರುಕುಳ ಕೊಟ್ಟು ಮನಸ್ಸನ್ನು ಘಾಸಿಗೊಳಿಸಿದ್ದರಿಂದ ದಿನಾಂಕ ೧೮.೫.೧೯೫೬ ರಂದು ಮುಖ್ಯೋಪಾಧ್ಯಾಯ ವೃತ್ತಿಗೆ ರಾಜೀನಾಮೆಯಿತ್ತರು. ನಂತರ ೧೯೫೬ ರಿಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಸೇವೆ ಸಲ್ಲಿಸತೊಡಗಿದರು. ಡಾ.

ಗದ್ದಗಿಮಠ ಅವರು ೧೯೬೦ ನವ್ಹಂಬರ ೨ ರಂದು ಆಕಸ್ಮಿಕ ಮರಣಕ್ಕೀಡಾಗಿದ್ದರಿಂದ ಜಾನಪದ ಕ್ಷೇತ್ರ ತಬ್ಬಲಿಯಾಗಿ ಉಳಿಯುವ ಪ್ರಸಂಗ ಬಂದಿತು.

ಜಾನಪದ ಸಾಹಿತ್ಯದಲ್ಲಿ ವಿಶೆಷ ಅಭಿರುಚಿವುಳ್ಳವರಾದ ಡಾ. ಗದ್ದಗಿಮಠ ಅವರು ಜಮಖಂಡಿ, ಗಲಗಲಿ, ಮರೆಗುದ್ದಿ, ನಾಗರಾಳ, ಹಲಗಲಿ, ಬಾಗಲಕೋಟೆ, ಕೂಡಲಸಂಗಮ, ತಾಳಿಕೋಟಿ, ಮಮದಾಪುರ, ಬಬಲೇಶ್ವರ, ಇನ್ನೂ ಅನೇಕ ಊರುಗಳಿಗೆ ಪ್ರಯಾಣ ಕೈಕೊಂಡು ಜಾಣಪದ ಹಾಡುಗಳನ್ನು, ಕಥೆಗಳನ್ನು ಸಂಗ್ರಹಿಸಿದ್ದಾರೆ. ಬಾದಾಮಿ ಚಾಲುಕ್ಯರ ಬಗ್ಗೆ ಸಂಶೋಧನೆ ಮಾಡುತ್ತಿರುವ ಸಂದರ್ಭದಲ್ಲಿ ಬಾದಾಮಿ ಗುಹೆಗಳ ಬಗ್ಗೆ, ಐಹೊಳೆ, ಪಟ್ಟದಕಲ್ಲು, ಕರ್ನಾಟಕದ ನೆಟಗಲ್ಲು ಮುಂತಾದವುಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ.

ಪ್ರಬುದ್ಧ ಕರ್ನಾಟಕ, ಸಂಯುಕ್ತ ಕರ್ನಾಟಕ, ಶೂನ್ಯಸಂಪಾದನೆ, ಪ್ರಚಂಡ ಜೀವನಶಿಕ್ಷಣ, ಕರ್ಮವೀರ ಮೊದಲಾದ ಪತ್ರಿಕೆಗಳಲ್ಲಿ ಉತ್ತರ ಕರ್ನಾಟಕದ ಕೆಳದಿ ಮತ್ತು ಸ್ವಾದಿ ಮನೆತನದವರ ಬಗ್ಗೆ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿರುತ್ತವೆ. ದುರಗಮುರಗಿ, ಗೊಂದಲಿಗರು, ಶಿಶುನಾಳ ಶರೀಫರು ಮತ್ತು ಕನ್ನಡ ಲಾಲಿಜೋಗುಳಗಳು, ಅನುಭವ ಸಾಹಿತ್ಯ, ಅಳಿದುಳಿದ ಪುಲಿಗೆರೆ ಇತ್ಯಾದಿ ಲೇಖನಗಳನ್ನು ಡಾ. ಗದ್ದಗಿಮಠ ಅವರು ರಚಿಸಿದ್ದಾರೆ. ಅನುಭವ ಸಾಹಿತ್ಯ ಗದ್ದಗಿಮಠ ಅವರ ಪ್ರಸಿದ್ಧ ಲೇಖನ.

೧೯೬೭ರಲ್ಲಿ ಅಖಿಲ ಕರ್ನಾಟಕ ಮೊದಲ ಜಾನಪದ ಸಮ್ಮೇಳನದಲ್ಲಿ ಮೈಸೂರು ಮಹಾರಾಜರು "ಗದ್ದಗಿಮಠ ಮಂಟಪ" ಎಂದು ಮಂಟಪಕ್ಕೆ ನಾಮಕರಣ ಮಾಡಿ ಗೌರವ ಅರ್ಪಿಸಿದ್ದಾರೆ. ಮಾರನೆಯ ಜಾನಪದ ಸಮ್ಮೇಳನದಲ್ಲಿಯೂ "ಗದ್ದಗಿಮಠ ಮಂಟಪ" ಎಂದು ಹೆಸರಿಟ್ಟು ಜನತೆ ಗೌರವ ಸಲ್ಲಿಸಿದೆ.

## ಸಮಕಾಲೀನರು:

ಡಾ.ಎಂ.ಎಸ್.ಸುಂಕಾಪುರ, ಡಾ.ಆರ್.ಸಿ.ಹಿರೇಮಠ, ಎಸ್.ಎಸ್. ಮಾಳವಾಡ, ಶ್ರೀ ಎಸ್.ಎಸ್. ಬೂಸನೂರಮಠ, ಶ್ರೀ ಪಿ.ಬಿ. ದೇಸಾಯಿ, ಶ್ರೀ ಆರ್.ಆಸ್. ಪಂಚಮುಖಿ, ಶ್ರೀ ದ.ರಾ. ಬೇಂದ್ರೆ, ಶ್ರೀ ಬಸವರಾಜ ಕಟ್ಟೀಮನಿ, ಶ್ರೀ ಎಲ್. ಗುಂಡಪ್ಪ, ಶ್ರೀ ಚನ್ನವೀರ ಕಣವಿ, ಡಾ. ಗುರುಲಿಂಗ ಕಾಪಸೆ, ಆಲೂರ ವೆಂಕಟರಾಯರು, ಸಿದ್ಧಯ್ಯ ಪುರಾಣಿಕ, ಸಿಂಪಿಲಿಂಗಣ್ಣ ಮುಂತಾದವರು ಡಾ.ಬಿ.ಎಸ್.ಗದ್ದಗಿಮಠ ಅವರ ಸಮಕಾಲೀನ ಸಾಹಿತಿಗಳು.

## ಜನನ-ಬಾಲ್ಯ-ಶಿಕ್ಷಣ:

ಜಾನಪದ ಕ್ಷೇತ್ರದಲ್ಲಿ ಅಮೋಘ ಸೇವೆಯನ್ನು ಸಲ್ಲಿಸಿ ಖ್ಯಾತಿಗಳಿಸಿದ ವೀರಶೈವ ಪುಣ್ಯಪುರುಷರಾದ ಡಾ. ಬಿ.ಎಸ್. ಗದ್ದಗಿಮಠ ಅವರು ಹುಟ್ಟಿದ್ದು ಕೆರೂರ ಗ್ರಾಮದಲ್ಲಿ, ಬಿಜಾಪುರ ಜಿಲ್ಲೆಯ ಬದಾಮಿ ತಾಲೂಕಿನ ಚಿಕ್ಕಹಳ್ಳಿಯಿದು. ಶ್ರೀಮತಿ ಶಿವಗಂಗಾದೇವಿ ಮತ್ತು ಶ್ರೀ ಸಾವಳಿಗಯ್ಯನವರು ಇವರ ತಂದೆ-ತಾಯಿಗಳು. ಈ ದಂಪತಿಗಳು ಪುಣ್ಯಗರ್ಭದಲ್ಲಿ "ಚಿಪ್ಪಿನೊಳ್ಕಾಸಾರಂ ಪುಟ್ಟುವಂತೆ" ಬಸವರಾಜ (ಬಸಯ್ಯ) ಅವರು ಕ್ರಿ.ಶ. ೧೯೨೦ ರಲ್ಲಿ ಜನಿಸಿದರು. ಕೃಷಿಪ್ರಧಾನ ಮನೆತನ ಇವರದು. ಧರ್ಮದಲ್ಲಿ ಅಪಾರ ನಿಷ್ಠಾವಂತರಾಗಿ ತಮ್ಮ ಪಾಲಕರ ಜೀವನಾದರ್ಶಗಳನ್ನು ಸದಾಕಾಲ ಪಾಲಿಸುವ ಮನೋಭಾವವುಳ್ಳವರಾಗಿದ್ದರು.

ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮ ಕೆರೂರನಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ಬಾಗಲಕೋಟೆಯಲ್ಲಿ ಪಡೆದರು. ಹೈಸ್ಕೂಲಿನಲ್ಲಿ ಓದುತ್ತಿರುವ ಸಂಧರ್ಭದಲ್ಲಿ ಬಸಯ್ಯನವರು ತಮ್ಮ ವಿಶಿಷ್ಟ ಜಾಣ್ಮೆಯಿಂದ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಡಾ. ಡೇ ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. "ಬೆಳೆಯುವ ಪೈರು ಮೊಳಕೆಯಲ್ಲಿ ನೋಡು" ಎಂಬಂತೆ ಆದರ್ಶ ವಿದ್ಯಾರ್ಥಿಯಾಗಿ ಸರ್ವ ಗುರುಗಳ ಪ್ರೀತಿಯ

ಕಣ್ಮಣಿಯಾದರು. ಸ್ನಾತಕ ಪದವಿಯನ್ನು ಬೆಳಗಾಂವಿಯ ಲಿಂಗರಾಜ ಮಹಾವಿದ್ಯಾಲಯದಲ್ಲಿ ಮತ್ತು ಸ್ನಾತಕೋತ್ತರ ಪದವಿಯನ್ನು ಕೊಲ್ಲಾಪುರ ವಿಶ್ವವಿದ್ಯಾಲಯದಲ್ಲಿ ಪಡೆದರು. ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಜಾನಪದ ಗೀತೆಗಳು' ವಿಷಯ ಕುರಿತು ಡಾಕ್ಟರೇಟ ಪದವಿ ಪಡೆದ ಜಾನಪದ ಕ್ಷಿತಿಜದ ಆದ್ಯ ದಿಗ್ಗಜರೆನಿಸಿದರು.

## ಮಲ್ಲಮಲ್ಲಾಣಿ:

ಡಾ. ಗದ್ದಗಿಮಠ ಅವರ ಇನ್ನೊಂದು ಕೃತಿ 'ಮಲ್ಲಮಲ್ಲಾಣಿ' ೧೯೫೫ ರಲ್ಲಿ ಪ್ರಕಟವಾಗಿದೆ. ಇದನ್ನು ಮಹಾಶೃಂಗಾರ ಹಾಡುಗಬ್ಬ ಎಂದು ಕರೆಯಲಾಗಿದೆ. ಜನಪದ ಕವಯಿತ್ರಿ ಶಿವಶರಣೆ ಶಾವಂತ್ರಾದೇವಿ ಹಾಡಿದ ಹಾಡುಗಬ್ಬವಿದು. ದಿ. ಗದ್ದಗಿಮಠ ಅವರ ಚಿಕ್ಕ ಅಜ್ಜಿ ಈ ಕವಿಯತ್ರಿ. ಮಲುಹಣ-ಮಲುಹಣಿಯರ ಪ್ರೇಮ ಸಂಬಂಧ ಮತ್ತು ಅವರ ಲಾವಣ್ಯ, ಉತ್ಕಟ ಪ್ರೀತಿ, ಶಿವಪೂಜೆ ಇತ್ಯಾದಿಗಳು ಈ ಹಾಡುಗಬ್ಬದಲ್ಲಿ ಮನಂಬುಗುವಂತೆ ಚಿತ್ರಣಗೊಂಡಿವೆ.

ಹಾಡುವುದೆ ಹಾಡುಗಬ್ಬದ ವೈಶಿಷ್ಟ್ಯ. ಅದನ್ನು ನೂರೊಂದು ರಾಗ ರಾಗಿಣಿಗಳಲ್ಲಿ ಹಾಡುವರು. ಅನೇಕ ರಾಗರಾಗಿಣಿಗಳನ್ನೊಳಗೊಂಡ "ಶರಣ ಲೀಲಾಮೃತ"ವು ಆಗಿನ ಕಾಲದ ಒಂದು ಮಾದರಿಯ ಹಾಡುಗಬ್ಬವೆಂದೇ ಖ್ಯಾತಿಪಡೆದಿದೆ. ಈಗ ಹಳ್ಳಿಗರ ಬಾಯಿಂದ ದೊರೆಯುವ ಹಾಡುಗಬ್ಬಗಳು ಹೆಚ್ಚಾಗಿ ಶಿವಶರಣರ ಕಥನ-ಕವನಗಳಾಗಿವೆ.

ಮಲ್ಲಮಲ್ಲಾಣಿ ಹಾಡುಗಬ್ಬವು ಶಿವಭಕ್ತನಾದ ಮಲುಹಣನ ಕಥೆಯನ್ನು ಒಳಗೊಂಡಿದೆ. ವೀರಶೈವ ಕವಿಗಳಲ್ಲಿ ಹಲವರು ತಮ್ಮ ಕೃತಿಗಳಲ್ಲಿ ಮಲುಹಣನ ಕಥೆಯನ್ನು ಪ್ರಸಂಗಕ್ಕನುಸಾರವಾಗಿ ಬಳಸಿಕೊಂಡಿದ್ದಾರೆ. ಹಂಪೆಯ ಹರಿಹರನೇ ಪ್ರಪ್ರಥಮವಾಗಿ ಮಲುಹಣನ ಕಥೆಯನ್ನು ಕನ್ನಡದಲ್ಲಿ ಕಾವ್ಯರೂಪದಲ್ಲಿ ಬರೆದಿರುವನು. ತ್ರಿಷಷ್ಠಿ ಶಲಾಕಾ ಪುರುಷರ ಚರಿತ್ರೆ ಕುರಿತು ರಗಳೆಯನ್ನು ರಚಿಸಿದ ಹರಿಹರನು ಶಿವಭಕ್ತ ಮಲುಹಣನ ರಗಳೆಯನ್ನು ಸೃಷ್ಟಿಸಿದ್ದಾನೆ. ಸಂಸ್ಕೃತದಲ್ಲಿ 'ಮಲ್ಹಣ ಸ್ತೋತ್ರ' ವೆಂಬ ಖಂಡಕಾವ್ಯವೂ ಇರುತ್ತದೆ.

"ಮಲ್ಲಮಲ್ಲಾಣಿ" ಹಾಡು ಒಂದು ಮಹಾಶೃಂಗಾರ ಹಾಡುಗಬ್ಬ. ಪ್ರೇಮ ಅಂಕುರಿಸಿ ಪ್ರಣಯ ಮಳೆಗರೆದು ದಾಂಪತ್ಯ ವೃಕ್ಷವಾಗಿದೆ-ಪಾರಮಾರ್ಥ ಪರಿಮಳದೊಡನೆ ಈ ಹಾಡುಗಬ್ಬ. ಈ ಹಾಡುಗಬ್ಬವು ಪ್ರಣಯಿಗಳಿಗೆ ಪ್ರಣಯರಸಾಯನ, ದಂಪತಿಗಳಿಗೆ ಪ್ರಣಯ ದಾಂಪತ್ಯದ ಗುಟ್ಟು, ಶಿವಭಕ್ತರಿಗೆ ಪ್ರಪಂಚದಲ್ಲಿಯ ಪಾರಮಾರ್ಥದ ಗುಟುಕು. ಆದುದರಿಂದ ಹಳ್ಳಿಯ ಹೆಣ್ಣು ಪ್ರಣಯ ದಾಂಪತ್ಯ ಪಾರಮಾರ್ಥ-ಈ ಮೂರನ್ನು ಅರಿತುಕೊಳ್ಳಲು ಈ ಹಾಡನ್ನು ಭಕ್ತಿಯಿಂದ ಇಂದಿನವರೆಗೆ ಹಾಡುತ್ತ ಬಂದಿದೆ. ಇದರಲ್ಲಿಯ ಪ್ರೇಮವು ಪ್ರಣಯಕ್ಕಿಳಿದರೂ ದಾಂಪತ್ಯದಲ್ಲಿ ಅರಳಿದೆ. ಆದುದರಿಂದ ಅದನ್ನು ಓದಲು ಪ್ರೇಮ ಹಾಗೂ ಕೇಳಲು ಭಕ್ತಿ ತುಂಬುವುವು. ಇವೆರಡರೊಡನೆ ಬೇಡೆಂದರೂ ಆ ಪ್ರಪಂಚವು ಪಾರಮಾರ್ಥವಾಗುವುದು. ಅಷ್ಟು ಅಪೂರ್ವವಾಗಿದೆ ಜನಪದದಲ್ಲಿ 'ಮಲ್ಲಮಲ್ಲಾಣಿ' ಹಾಡು-ಎಂದು ಈ ಕೃತಿಯ 'ಅಂತದರ್ಶನ'ದಲ್ಲಿ ಡಾ. ಗದ್ದಗಿಮಠ ಅವರು ನುಡಿದಿದ್ದಾರೆ.

ಈ ಕೃತಿಯ ಪ್ರಾರಂಭದಲ್ಲಿ ಪೀಠಿಕಾ ಸಂಧಿಯಂತೆ ಎರಡು ಭಾಗಗಳಿರುತ್ತವೆ. ಮುಂದಿನ ನಾಲ್ಕು ಸಂಧಿಗಳಲ್ಲಿ ಕಥೆ ಮುಕ್ತಾಯವಾಗುತ್ತದೆ. ಮಾಹಾತ್ಮರನ್ನು ನೆನಸಿ ಹಾಡಿಕೊಂಡ ತ್ರಿಪದಿಗಳಲ್ಲಿ ಕವಿಯಿತ್ರಿಯ ಒಂದು ವ್ಯಾಪಕ ಮನೋಭಾವ ಕಂಡುಬರುತ್ತದೆ. ವೈಷ್ಣವ ಸಂಪ್ರದಾಯದಲ್ಲಿ ಹೆಚ್ಚಾಗಿ ನೆಲೆಗೊಂಡು ಮೇಲ್ಮೆ ಹೊಂದಿದ ಸೀತಾ ದ್ರೌಪದಿಯರು ಈ ಶೈವ ಪ್ರಬಂಧದಲ್ಲಿ ಗೌರವದಿಂದ ಸೇಪರ್ಡೆಯಾದುದು ಕೌತುಕದ ವಿಷಯವೇ ಸರಿ! ದರೆ ಮಲುಹಣಿಯ ತಾಯಿ ಪದ್ಮಾವತಿ, ಈ ಕಥೆಯಲ್ಲಿ ಮದುವೆಗಾಣದೆ ಹಾದರದ ಹಾದಿಯನ್ನು ಹಿಡಿದ ಹಾರುವರ ಪದ್ಮಕ್ಕನಾಗುತ್ತಾಳೆ. ಆಕೆ ಒಬ್ಬ ದೇವದಾಸಿ, ಮಲುಹಣನೂ ಕಾಶ್ಮೀರದ ಶೈವ ಬ್ರಾಹ್ಮಣನೇ. ಈ ಪದ್ಧಕ್ಕನ ಹಾದರಕ್ಕೆ ಹುಟ್ಟಿದ ಮಗಳೊಡನೆ ಮಲುಹಣ ರತಿ ಬೆಳೆಸುತ್ತಾನೆ, ಇದ್ದ ದುಡ್ಡೆಲ್ಲ ಹಾಳು ಮಾಡಿಕೊಳ್ಳುತ್ತಾನೆ. ಕುಟ್ಟಿನಿ ಮತಾನುಸಾರವಾಗಿ ಮಲುಹಣಿಯ ತಾಯಿ ಮಲುಹಣ-ಮಲುಹಣಿಯರನ್ನು ಅಗಲಿಸುತ್ತಾಳೆ. ಮಲುಹಣಿ ತಮ್ಮ ತಾಯಿಗೆ ಆದೀನೆ. ಮಲುಹಣದ ವಿರಹ

ಪ್ರೇಮಪಾಕವನ್ನು ತಂದು ಕೊಡುತ್ತದೆ. ಮಲುಹಣಿ ಆಡಿದ ಮಾತೇ ಮಲುಹಣನಿಗೆ ಶಿವಬೋಧೆ ತಂದು ಕೊಡುತ್ತಾನೆ. ‘ನಂಬಿಯಣ್ಣ’ ‘ಪರವೆನಾಚಿ’ ‘ಪ್ರಭುದೇವರು-ಕಾಮಲತೆ-ಜಂಗಮಕ್ಕೆ ಅಂಗಭೋಗವನ್ನು ಕೊಡುವ ಕಾಯಕ ನಿಂಬಿ, ಮತ್ತೆ ಬೇರೆ ಅನೇಕ ವಿಟಜಂಗಮರ ಕಥೆಗಳು – ಇವೆಲ್ಲ ಓದಿದ ಪಂಡಿತ ವಾಚಕನಿಗೆ ಆಗಲಿ, ಶೈವಭಕ್ತರ ಇಂಥ ಕಥೆಗಳನ್ನು ಕೇಳಿ ಅಭ್ಯಾಸವಾದ ಜನಕ್ಕಾಗಲಿ ಇದರಲ್ಲಿ ಅಸಾಮಾನ್ಯ, ಅಸಂಭವ ಏನೂ ತೋರುವುದಿಲ್ಲ. ಆದರೂ ಜಾನಪದ ಕವಿಯಿತ್ರಿ ಶಾವಂತ್ರಾದೇವಿಯವರು ಮಲುಹಣನಿಗೆ ಶಿವಸಾಕ್ಷಾತ್ಕಾರವಾದ ಮೇಲೆ ಮಲುಹಣ-ಮಲುಹಣಿಯರ ಸಂಬಂಧ ಸತಿ – ಪತಿಯರದಾಯಿತು ಎಂದು ಹೇಳುತ್ತಾರೆ. ಮಲುಹಣ-ಮಲುಹಣಿಯರ ಕಥೆಯಲ್ಲಿ ಅವರ ಜೀವನ ಸ್ಥಿತಿಯ ಪೂರ್ವಭಾಗ ಘಟನಾಂತರಗಳಿಂದ ಕೂಡಿದೆ. ಆದರೆ, ಆ ಮೇಲಿನ ನೂರು ವರ್ಷದ ಜೀವನ ಸತಿ-ಪತಿಗಳ ಶಿವರತಿ-ಭೋಗದಲ್ಲಿಯೇ ಕಳೆದು ಹೋಯಿತು ಎಂಬ ಮಾತಿನಿಂದಲೇ ಕುತೂಹಲಿ ತೃಪ್ತನಾಗಬೇಕಾಗುತ್ತದೆ.

ಶಂಕರಾಚಾರ್ಯರು ಬರೆದಿರುವ ‘ಅಮರಶತಕ’ ಅಥವಾ ಅವರ ಸಮಗ್ರ ‘ಸೌಂದರ್ಯಲಹರಿ’ ಇವುಗಳನ್ನು ನೋಡಿದರೆ ಮಲುಹಣ ರಚಿತ ಶಿವಸ್ತೋತ್ರ ಶೃಂಗಾರದ ರೀತಿಯಲ್ಲಿ ಸಪ್ಪೆಯಾಗಿ ತೋರುತ್ತದೆ. ಆದರೂ ಅದು ಉದ್ಧೀಪ್ತ ಭಾವನೆಯ ಕಾವ್ಯ. ಅದರೊಳಗಿನ ರತ್ಯಾಸೆಯು ಪ್ರಚ್ಛನ್ನವಾಗಿದೆ. ಇದಲ್ಲದೆ ಆ ಸ್ತ್ರೋತ್ರದಲ್ಲಿ ಕರ್ನಾಟಕದ ವಿಶೇಷ ಉಲ್ಲೇಖವಿದೆ. ಇದರ ಮೂಲಕ ಮೋಳಿಗೆಯ ಮಾರಯ್ಯನಂತೆ ಮಲುಹಣನ ಕಾಶ್ಮೀರವೂ ಕಲ್ಯಾಣಕ್ಕೆ ಬಹಳ ಸಮೀಪದ್ದಾಗಿ ತೋರುತ್ತದೆ.

ಈ ಹಾಡುಗಬ್ಬದ ತುಂಬ ಬರುವ ಸೊಲ್ಲಿನ ವೈವಿಧ್ಯ ಕಿವಿಯಾರೆ ಕೇಳದೆ ಅದರ ಸೊಗಸನ್ನು ಊಹಿಸುವುದು ಕಷ್ಟ. ಆದರೆ ಕೆಲವೊಂದು ಸೊಲ್ಲುಗಳ ಔಚಿತ್ಯ ಜೇನಿನ ತೊಟ್ಟಿನಂತಿರುವ ಅವುಗಳ ರಸೋದ್ದೀಪಕತೆ ನಮ್ಮನ್ನು ಕಲ್ಪನಾ ರಾಜ್ಯಗಳಲ್ಲಿ ತೇಲಿಸುವದು. ಉದಾ-

**ಪ್ರಣಯ ಪ್ರಪಂಚೆರಡು ಪ್ರಣಮರೂಪಿಗೆಡೆಯು**
**ಪ್ರಣಯಿ ಮಲ್ಲಾಣ ವಿರಹವನೆ |ನೀ| ಎಡಿಮಾಡಿ**
**ಪ್ರಣಯುಂಡು ತೊಳೆದ ಶತವರುಷ |ನೀ|**

ಮಲುಹಣ-ಮಲುಹಣಿಕಯರ ಪರಸ್ಪರಾನುರಾಗ, ಅವರ ಲಾವಣ್ಯ ಮಲುಹಣ ಶಿವಪೂಜೆಯೊಳಗಿನ ಹೂವುಗಳನ್ನು ಪೂಜೆಗಾಗಿ ಕರೆಯುವ ಆತ್ಮೀಯತೆ, ಕಾವ್ಯಮಯತೆ ಇವನ್ನೆಲ್ಲ ಕಂಡು ನೃಪತುಂಗನು ಕನ್ನಡ ನಾಡಿನ ಜನರ ರಸಿಕತೆಯನ್ನು ವರ್ಣಿಸಿರುವದು ಆತಿಶಯೋಕ್ತಿಯೆನಿಸದು.

ನಾಡ ಶರಣರ ಸಾತ್ವಿಕ ಜೀವನವು ಸಾಮಾನ್ಯ ಮನುಷ್ಯನನ್ನು ಆಕರ್ಷಿಸಲು ಅವನು ಅವರನ್ನು ಹಾಡಿಕೊಂಡಿದ್ದಾನೆ. ಆದ್ದರಿಂದ ಅನೇಕ ಶಿವಶರಣರ ಕಥೆಗಳು ಹಾಡುಗಬ್ಬಗಳಿಗೆ ಕಥಾವಸ್ತುಗಳಾಗಿವೆ. ಮಲುಹಣನ-ಪ್ರಣಯ-ದಾಂಪತ್ಯ- ಪಾರಮಾರ್ಥದ ಬಗೆಯನ್ನು ಮೆಚ್ಚಿದ ಹಳ್ಳಿಗರು ಸರಾಗವಾಗಿ ರಾಗರಾಗಿಣಿಗಳಲ್ಲಿ ಅವನ ಕಥೆಯನ್ನು ಹಾಡಿದ್ದಾರೆ. ಯಾವ ಸಂದರ್ಭದಲ್ಲಿಯೇ ಆಗಲಿ, ಮಲುಹಣನ ಕಥೆಯಲ್ಲಿ ಶೃಂಗಾರವು ಶಿವಭಕ್ತಿ ಸಾರವಾಗಿ ಪರಿಣಮಿಸಿದೆ. ಇದನ್ನು ಇನ್ನಿತರ ಕಾವ್ಯಗಳಿಗಿಂತ ಜನಪದ ಸಾಹಿತ್ಯದಲ್ಲಿ ಮಲ್ಲಮಲ್ಲಾಣಿ ಹಾಡಿನಲ್ಲಿ ತುಂಬ ಸ್ವಾರಸ್ಯಕರವಾಗಿ ಕಾಣಬಹುದು. ಈ ಹಾಡುಗಬ್ಬವನ್ನು ಹಾಡಿದ ಕವಯಿತ್ರಿಯು ಮೂಲ ಕಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ.

ಮಲುಹಣಿಯ ಮೂಲ ಹೆಸರು ‘ಗಂಗಾಜಮನೆ’, ಅವಳ ತಾಯಿಯ ಹೆಸರು ‘ಪದ್ದಕ್ಕ’. ಶಿವಭಕ್ತ ಮಲುಹಣನ ಸೋಬತಿಯಿಂದ ಅವಳು ‘ಮಲುಹಣಿ’ಯಾದವಳೆಂದು ಹಾಡಿದ್ದಾರೆ. ಈ ಮಾರ್ಪಾಟುಗಳಿಂದ ಕಥೆಯು ಮತ್ತಿಷ್ಟು ನೈಜವಾಗಿ ಓದುಗರನ್ನು ಆಯಸ್ಕಾಂತದಂತೆ ಸಹಜವಾಗಿ ಆಕರ್ಷಿಸುತ್ತದೆ. ಈ ಮಲ್ಲಮಲ್ಲಾಣಿಯ ಹಾಡುಗಬ್ಬವನ್ನು ಗದಗದಲ್ಲಿಯೂ ನವಲಗುಂದದಲ್ಲಿಯೂ ಗಲಗಲಿಯಲ್ಲಿಯೂ ಹಾಡುತ್ತಿದ್ದರೆಂದು ತಿಳಿದು ಬರುತ್ತದೆ.

ಜನಪದ ಸಾಹಿತ್ಯದ ಹಾಡುಗಳಲ್ಲಿ ಪ್ರತಿಪದ್ಯವನ್ನು ಹಾಡಿದ ಮೇಲೆ ಪಲ್ಲವಿಯ ಪುನರುಕ್ತವಾಗುತ್ತದೆ. ಆ ಪುನರುಕ್ತ ಪಲ್ಲವಿಯು ಸೊಲ್ಲೆತ್ತಿ ಹಾಡಿದರೆ ಆ ಹಾಡಿಗೆ ಹೆಚ್ಚಿನ ಸೊಗಸುಂಟಾಗುತ್ತದೆ. ಆದ್ದರಿಂದ ಹಾಡುಗಳಲ್ಲಿ ಸೊಲ್ಲಿಗೆ ಸಲಿಗೆ ರಾಗಕ್ಕೆ ಪ್ರಾಧಾನ್ಯ, ಈ ಹಾಡುಗಬ್ಬದಲ್ಲಿ ಪಲ್ಲವಿಯ ಸೊಲ್ಲು ಧಾಟಿ-ಧರತಿಗಳೊಂದಿಗೆ ಅತ್ಯಂತ ಸಮೃದ್ಧವಾಗಿ ಬಂದು ಹಾಡುಗಳ ಸನ್ನಿವೇಶಗಳನ್ನು ಮತ್ತಷ್ಟು ರಮಣೀಯಗೊಳಿಸಿರುತ್ತವೆ. ಈ ಕೃತಿಗೆ ದ.ರಾ. ಬೇಂದ್ರೆಯವರ ಮುನ್ನುಡಿಯೂ ಹೆಚ್ಚಿನ ಶೋಭೆಯನ್ನುಂಟು ಮಾಡಿರುತ್ತದೆ.

## ಆಹ್ವಾನ:

೧೯೬೦ -೬೧ ರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಲು ವಿದೇಶಕ್ಕೆ ಪ್ರಯಾಣ ಕೈಕೊಳ್ಳುವ ನಿಮಿತ್ತ ಆಹ್ವಾನ ಪತ್ರವು ಡಾ. ಗದ್ದಿಗಿಮಠ ಅವರಿಗೆ ಬಂದಿತ್ತು. ಆ ವೇಳೆಗೆ ವಿಧಿ ಅವರನ್ನು ಪರದೇಶಕ್ಕೆ ಹೋಗಲು ಅವಕಾಶ ಕೊಡದೇ ತನ್ನ ವಶಪಡಿಸಿಕೊಂಡುಬಿಟ್ಟಿತು

## ಪವಾಡ ಪುರುಷ:

ಡಾ. ಗದ್ದಗಿಮಠ ಅವರು ಪಾವಾಡ ಪುರುಷರು ಆಗಿದ್ದರು ಎಂಬುದಕ್ಕೆ ನಿದರ್ಶನವೆಂದರೆ ಆಕಾಶದಲ್ಲಿನ ನಕ್ಷತ್ರಗಳಲ್ಲಿ ಒಂದಾಗಿರುವ 'ಮೆಲ್‌ತರಂಗ' ನಕ್ಷತ್ರದ ಆಧಾರದಿಂದ ಅವರು ತಮ್ಮ ಸಾವಿನ ಬಗ್ಗೆ ಪತ್ನಿ ಅನಸೂಯಾದೇವಿ ಅವರಿಗೆ ಮೊದಲೆ ಹಲವು ಬಾರಿ ಹೇಳಿದ್ದರಂತೆ. ಅಲ್ಪ ವಯಸ್ಸಿನಲ್ಲಿಯೆ ಅಸಾಮಾನ್ಯ ಜೀವನ ನಡೆಸಿ 'ಲೇಸಿನದಲ್ಲದ ಸಾವಿರ ವರುಷದ ಬದುಕಿಗಿಂತ ಲೇಸಿನ ಚಣದ ಸಾರ್ಥಕ ಬದುಕು ಬದುಕಿದ' ಡಾ. ಗದ್ದಗಿಮಠ ಅವರ ಜೀವನ ಅಜರಾಜಮರವಾದುದು.

ಡಾ. ಗದ್ದಗಿಮಠ ಅವರದು ತೊಕಬದ್ದವ್ಯಕ್ತಿತ್ವ. ವಿನಯ ಶಾಲಿಗಳು, ಅತ್ಯಂತ ಶಿಸ್ತುಪ್ರಿಯರು. ಪಾರದರ್ಶಕದಂತಹ ಪ್ರಾಮಾಣಿಕ ಜೀವಿಗಳು, ಸರಕಾರದ ಒಂದು ಗುಂಡುಸೂಜಿಯನ್ನು ತಮಗಾಗಿ ಬಳಸಿದವರಲ್ಲ. ಉದಾರ ಹೃದಯವುಳ್ಳವರು. ದಾನ ಮಾಡುವುದರಲ್ಲಿ ಎತ್ತಿದ ಕೈ. ಯಾರಿಗೂ ತಮ್ಮಿಂದ ತೊಂದರೆಯಾಗದಂತೆ ನಡೆದುಕೊಳ್ಳುತ್ತಿದ್ದರು. ಸುಳ್ಳು ಆಡಿದವರಿಗೆ ತಕ್ಷಣಃ ಶಿಕ್ಷೆ ಕೊಡುತ್ತಿದ್ದರು.

ಒಂದು ದಿನ ಮಕ್ಕಳೊಂದಿಗೆ ಗದ್ದಗಿಮಠ ಅವರು ಚೋರಿ ಚೋರಿ ಸಿನಿಮಾಕ್ಕೆ ಹೋಗಿದ್ದರು.  ಸಿನೇಮಾ ಮುಗಿದ ನಂತರ ಅದರಲ್ಲಿರುವ ನೀತಿಯನ್ನು ಮಕ್ಕಳಿಗೆ ತಿಳಿಸಿ ಹೇಳುತ್ತಾ ನಾಲ್ಕು ಜನರಲ್ಲಿ ಎದ್ದುಕಾಣುವಂತಹ ವ್ಯಕ್ತಿತ್ವ ನಿಮ್ಮದಾಗಬೇಕು ಎಂದು ಹೇಳಿ ಪ್ರಜ್ಞೆ ಮೂಡಿಸಿದರು. ಅಚ್ಚುಕಟ್ಟಾದ, ಕ್ರಮಬದ್ಧವಾದ ಜೀವನ ಡಾ. ಗದ್ದಗಿಮಠ ಅವರದಾಗಿತ್ತು. ಅವರ ಮನೆಯು ಶಾಂತಿನಿಕೇತನದಂತಿತ್ತು.

## ಹವ್ಯಾಸಗಳು:

ಜಾನಪದ ಸಾಹಿತ್ಯದ ಬಗ್ಗೆ ಕ್ಷೇತ್ರ ಕಾರ್ಯದಲ್ಲಿ ಅವ್ಯಾಹತವಾಗಿ ತೊಡಗುವದು ಅವರ ಪ್ರಮುಖ ಹವ್ಯಾಸವಾಗಿತ್ತು. ಈಜುವುದು, ಹಾಡುವುದು, ಪ್ಲೂಟ ಬಾರಿಸುವುದು, ರೇಸಿಂಗ್, ಲಾಠಿ ಪ್ರಯೋಗ ಇತ್ಯಾದಿಗಳಲ್ಲಿ ಬಹುಮುಖ ವ್ಯಕ್ತಿತ್ವವುಳ್ಳವರಾಗಿದ್ದರು. ವಿದ್ಯಾರ್ಥಿ ಜೀವನದಲ್ಲಿ ಅತ್ಯುತ್ತಮ ಅಥ್ಲೆಟಿಕ್‌ಪಟು ಎಂದು ಹೆಸರುಗಳಿಸಿದ್ದರು, ಮತ್ತು ಕವನ ರಚನೆ ಕಾರ್ಯದಲ್ಲಿಯು ವಿದ್ಯಾರ್ಥಿಯಾಗಿರುವಾಗಲೆ ನಿರತರಾಗಿರುತ್ತಿದ್ದರು. ಶಿಲಾಶಾಸನಗಳನ್ನು ಓದುವ ನೈಪುಣ್ಯವು ದೈವದತ್ತವಾಗಿ ದೊರೆತ ವಿಶಿಷ್ಟ ಕೊಡುಗೆಯಾಗಿತ್ತು. ಸಿದ್ದಪ್ಪ ಹಡಪದ ಅವರು ಡಾ. ಗದ್ದಗಿಮಠ ಅವರೊಂದಿಗೆ ಲಾಠಿ ಪ್ರಯೋಗದಲ್ಲಿ ಪೈಪೋಟಿ ಮಾಡುತ್ತಿದ್ದರು.

## ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣಗಳು:

ಕನ್ನಡ ಹಾಡುಗಬ್ಬಗಳು, ಕನ್ನಡ ಬಯಲಾಟ, ಪುಲಿಗೆರೆಯ ನಾಡು, ಕಾಯಕ ಶಿಕ್ಷಣದಲ್ಲಿ ಅನುಭಾವ ಪದ್ಧತಿ, ವೃಷಭ ಶಿಲಾಮೂರ್ತಿಗಳು ಈ ಮೊದಲಾದ ವಿಷಯಗಳ ಬಗ್ಗೆ ಬಾನುಲಿಯಲ್ಲಿ ಡಾ. ಗದ್ದಗಿಮಠ ಅವರ ಭಾಷಣಗಳು ಪ್ರಸಾರವಾಗಿರುತ್ತವೆ.

## ದಿನಚರಿ:

ಗಟ್ಟಿಮುಟ್ಟಾದ ದೇಹದಾರ್ಢ್ಯ ಹೊಂದಿದ ಗದ್ದಗಿಮಠ ಅವರಿಗೆ ವ್ಯಾಯಾಮ ಮಾಡುವುದು ನಿತ್ಯದ ದಿನಚರಿಯಾಗಿತ್ತು. ಪ್ರತಿದಿನ ನಸುಕಿನಲ್ಲೆದ್ದು ಹವೆ ಸೇವಿಸುವುದು, ದಿನನಿತ್ಯ ಒಂದು ಗಂಟೆ ತೋಟದ ಕಾಯಕದಲ್ಲಿ ನಿರತವಾಗುವದು, ಕುಸ್ತಿ ಆಡುವದು ಎಂದರೆ ಎಲ್ಲಿಲ್ಲದ ಹುರುಪು ಹುಮ್ಮಸ್ಸು ತುಂಬಿದಂತಾಗುತ್ತಿತ್ತು. ಈ ಮೊದಲಾದವುಗಳು ಅವರ ನಿತ್ಯ ದಿನಚರಿಯಾಗಿದ್ದವು.

## ಕೌಟುಂಬಿಕ ಜೀವನ:

ಡಾ. ಬಿ.ಎಸ್. ಗದ್ದಗಿಮಠ ಅವರ ಕೌಟುಂಬಿಕ ಜೀವನವು ಸುಂದರ ನಂದನ ವನವಾಗಿತ್ತು. ಬಸಯ್ಯನವರ ಪತ್ನಿ ಅನಸೂಯಾದೇವಿ ಅವರು ತೊರಗಲ್‌ಸಂಸ್ಥಾನದ ದಿವನರಾದ ಚರಂತಿಮಟ ಅವರ ಸುಪುತ್ರಿ, ಅನಸೂಯಾದೇವಿ ಅವರು ನಾಲ್ಕನೆಯ ತರಗತಿವರೆಗೆ ಉರ್ದು ಮತ್ತು ಮರಾಠಿಯಲ್ಲಿ, ಏಳನೆಯ ತರಗತಿಯವರೆಗೆ ಕನ್ನಡದಲ್ಲಿ ವಿದ್ಯಾಭ್ಯಾಸ ಪೂರೈಸಿದ್ದರು. ಈ ದಂಪತಿಗಳಿಗೆ ಐದು ಜನ ಮಕ್ಕಳು. ಸಾವಳಿಗಯ್ಯ, ರುದ್ರಯ್ಯ (ರವಿ), ಪುಲಕೇಶಿ, ನಿಜಗುಣದೇವ, ಅಕ್ಕಮಹಾದೇವಿ, ಒಟ್ಟು ನಾಲ್ಕು ಗಮಡು ಮಕ್ಕಳು ಒಬ್ಬ ಹೆಣ್ಣು ಮಗಳನ್ನು ಪಡೆದ ತುಂಬು ಸಾಂಸಾರಿಕ ಜೀವನ ಅವರದಾಗಿತ್ತು.

ಗದ್ದಗಿಮಠ ಅವರ ಹಿರಿಯಮಗ ಸವಳಿಗಯ್ಯನವರು ಕೃಷಿ ಕಾಯಕದೊಂದಿಗೆ Horticulture ನಲ್ಲಿ ತುಂಬಾ ಆಸಕ್ತಿಯುಳ್ಳವರಾಗಿ ಸ್ವಂತ ಉದ್ಯೋಗದಲ್ಲಿ ತೊಡಗಿದ್ದಾರೆ. ದ್ವಿತೀಯ ಸುಪುತ್ರ ರುದ್ರಯ್ಯನವರು ಎಂ.ಎ.,ಎಂ.ಲಿಬ್. ಪದವೀಧರರಾಗಿದ್ದು ಹೈದರಾಬಾದಿನ ಕೃಷಿ ಸಂಶೋಧನಾ ಆಡಳಿತಾಧಿಕಾರಿಗಳು ಮತ್ತು Information Science Library Science National Academy ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ತೃತೀಯ ಕುವರ ಪುಲಕೇಶಿಯವರು ಎಂ.ಎಸ್ಸಿ. ಪದವೀಧರರಾಗಿದ್ದು ಬೆಂಗಳೂರಿನಲ್ಲಿ Horticulture ಸಂಶೋಧನಾ ಸಂಸ್ಥೆಯಲ್ಲಿ ತಾಂತ್ರಿಕ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಚತುರ್ಥ ಸುಪುತ್ರಿ ಅಕ್ಕಮಹಾದೇವಿ ಅವರು ಮನಃಶ್ಯಾಸ್ತ್ರದಲ್ಲಿ ಎಂ.ಎ. ಪದವೀಧರರಾಗಿದ್ದು ಗುಲ್ಬರ್ಗಾದ ಮಹಿಳಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿ ವೃತ್ತಿ ನಿರತರಾಗಿರುತ್ತಾರೆ. ಕೊನೆಯ ಮಗ ನಿಜಗುಣದೇವ ಕೃಷಿವಿಜ್ಞಾನದಲ್ಲಿ ಎಂ.ಎಸ್ಸಿ. ಪದವಿ ಪಡೆದು ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿರುತ್ತಾರೆ.

ಡಾ. ಗದ್ದಗಿಮಠ ಅವರ ಐದು ಮಕ್ಕಳ ಹೆಸರುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪ್ರತಿಯೊಬ್ಬರ ಹೆಸರಿನಲ್ಲಿ ಒಂದು ವೈಶಿಷ್ಟ್ಯತೆ ಅಡಗಿರುವದು ಕಂಡು ಬರುತ್ತದೆ. ತಮ್ಮ ತಂದೆಯವರ ಹೆಸರನ್ನು ಸಂಪ್ರದಾಯದಂತೆ ಜೇಷ್ಠ ಸುಪುತ್ರನಿಗೆ ಸಾವಳಿಗಯ್ಯ ಎಂದು ನಾಮಕರಣ ಮಾಡಿದ್ದಾರೆ. ಗದ್ದಗಿಮಠ ಅವರು ಸಂಶೋಧನಾ ಕ್ಷಿತಿಜದಲ್ಲಿ ವಿಶೇಷ ಆಸಕ್ತಿವುಳ್ಳವರಾಗಿದ್ದು, ಷಟ್‌ಸ್ಥಲ ಉದ್ಧರಣೆಯ ಅನ್ವೇಷಣೇಯಲ್ಲಿ ನಿರತರಾಗಿರುವ ಸಂದರ್ಭದಲ್ಲಿ ಮತ್ತು ತತ್ವಶಾಸ್ತ್ರದ ಬಗ್ಗೆ ಅಧ್ಯಯನದಲ್ಲಿ ಮಗ್ನರಾಗಿರುವ ಅವಧಿಯಲ್ಲಿ ಎರಡನೆಯ ಮಗ ಜನಿಸಿದ್ದರಿಂದ ರುದ್ರಯ್ಯ ಎಂದು ಹೆಸರು ಇಟ್ಟಿರುತ್ತಾರೆ. ಪುಲಿಗೆರೆಯ ಬಗ್ಗೆ ಸಂಶೋಧನೆ ಕೈಕೊಂಡಾಗ ಮತ್ತೊಬ್ಬ ಮಗ ಜನಿಸಿರುವ ನಿಮಿತ್ತ ಪುಲಕೇಶಿ ಎಂದು ಕರೆದಿರುತ್ತಾರೆ. ವಚನ ಸಾಹಿತ್ಯ ಮತ್ತು ಅಕ್ಕಮಹಾದೇವಿಯ ಜೀವನ ಚರಿತ್ರೆ ಕುರಿತು ಸಂಶೋಧನಾತ್ಮಕ ದೃಷ್ಟಿಕೋನದಿಂದ ಅಧ್ಯಯನ ಮಾಡುವಾಗ ಮಗಳು ಹುಟ್ಟಿರುವುದರಿಂದ ಕುವರಿಗೆ ಅಕ್ಕಮಹಾದೇವಿ ಎಂದು ಹೆಸರು ಇಟ್ಟಿರುತ್ತಾರೆ.

ನಿಜಗುಣ ಶಿವಯೋಗಿಗಳ ಬಗ್ಗೆ ಅಧ್ಯಯನ ಮಾಡುತ್ತಿರುವ ಸಮಯದಲ್ಲಿ ನಿಜಗುಣ ಶಿಯೋಗಿಯೇ ಕೊನೆಯ ಮಗನರೂಪದಲ್ಲಿ ಜನಿಸಿರುತ್ತಾರೆ.

ಬೆಳಗಾಂವಿ ಜಿಲ್ಲೆಯ ಎಂ.ಕೆ. ಹುಬ್ಬಳ್ಳಿಯವರಾದ ಚನ್ನಪ್ಪಣ್ಣ ಹಟ್ಟಿಹೊಳಿಯವರೊಂದಿಗೆ ಗದ್ದಗಿಮಠ ಅವರು ಅನ್ಯೋನ್ಯ ಸ್ನೇಹವುಳ್ಳವರಾಗಿದ್ದರು. ಮಲ್ಲಪ್ಪ ಹಟ್ಟಿಹೊಳಿ, ವೀರಭದ್ರಪ್ಪ, ರುದ್ರಪ್ಪ ಹಟ್ಟಿಹೊಳಿಯವರೊಂದಿಗೆ ಈಜಾಡಲು ಕುಸ್ತಿಯಾಡಲು ಹೋಗುತ್ತಿದ್ದರಲ್ಲದೆ, ರುದ್ರಪ್ಪ ಹಟ್ಟಿಹೊಳಿಯವರನ್ನು ತಮ್ಮ ಮನೆಯಲ್ಲಿಯೆ ಇಟ್ಟುಕೊಂಡು ಶಿಕ್ಷಣ ಕೂಡಾ ಕೊಡಿಸಿದ್ದಾರೆ. ವೀರಭದ್ರಪ್ಪನವರು ಅನಕ್ಷರಸ್ಥರಾಗಿದ್ದರೂ ಅವರಿಗೆ ಪ್ರೋತ್ಸಾಹ ಕೊಟ್ಟು ಟಿ.ಡಿ.ಬಿ. ಮೇಂಬರರಾಗಲು ಗದ್ದಗಿಮಠ ಅವರು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ರುದ್ರಪ್ಪ ಮತ್ತು ವೀರಭದ್ರಪ್ಪನವರ ಏಳ್ಗೆಗೆ ಡಾ. ಗದ್ದಗಿಮಠ ಅವರು ಕಾರಣೀಕರ್ತರಾಗಿದ್ದಾರೆ. ಅನೇಕ ಬಡವರಿಗೆ ದೀನ ದಲಿತರಿಗೆ ಉದಾರಭಾವದಿಂದ ಸಹಾಯ ಸಹಕಾರ ನೀಡಿ ಇತರರ ಬದುಕಿಗೆ ಪ್ರೇರಣಾ ಶಕ್ತಿಯಾಗಿದ್ದಾರೆ.

ಡಾ. ಗದ್ದಗಿಮಠ ಅವರು ಅಕಾಲಿಕ ಮೃತ್ಯುವಶರಾದಾಗ ಅವರ ಮಕ್ಕಳು ತುಂಬಾ ಚಿಕ್ಕವರಾಗಿದ್ದರು. ಧರ್ಮಪತ್ನಿ ಸರ್ವಭಾರ ಹೊತ್ತು ನಿಭಾಯಿಸುವ ದಿಟ್ಟ ಮಹಿಳೆಯಾಗಿದ್ದರು. ಧೈರ್ಯಗೆಡದೆ ಪ್ರತಿಯೊಬ್ಬ ಮಕ್ಕಳು ಉನ್ನತ ಹುದ್ದೆ ಪಡೆಯುವಂತೆ ಶ್ರಮವಹಿಸಿ ಪ್ರಯತ್ನಪಟ್ಟು ಸಾಕಷ್ಟು ನೋವು ನಲಿವಿನಲ್ಲಿ ಈಜಾಡಿ ಯಶಸ್ವಿಯಾದರು. ರಾಮದುರ್ಗ ತಾಲೂಕಿನ ಕಟಕೋಳ ಗ್ರಾಮದವರಾದ ಅನಸೂಯೂದೇವಿಯವರು ಆದರ್ಶಮಾತೆ ಎನಿಸಿದರು. ತಮ್ಮ ಅತ್ತೆಯವರಾದ ಶಿವಗಂಗಾದೇವಿಯವರಿಂದ ತ್ರಿಪದಿಗಳನ್ನು ನೊರೊಂದು ರಾಗದಲ್ಲಿ ಹಾಡುವ ಕಲೆಯನ್ನು ಎರವಲಾಗಿ ಪಡೆದು ಏಕಮಾತ್ರ ಪುತ್ರಿಯಾದ ಅಕ್ಕಮಹಾದೇವಿಯವರೊಂದಿಗೆ ಧಾರವಾಡದ ಆಕಾಶವಾಣಿಯಲ್ಲಿ ಜಾನಪದ ಹಾಡುಗಳನ್ನು ಹಲವಾರು ಬಾರಿ ಬಿತ್ತಿರಿಸಿ ಸಹೃದಯರ ಮನಸ್ಸನ್ನು ರಂಜಿಸಿದ್ದಾರೆ. ಪತಿಗೆ ತಕ್ಕ ಸತಿಯಾಗಿ ಸಹಬಾಳ್ವೆ ನಡೆಸುತ್ತಾ ಅತಿಥಿಗಳನ್ನು ಸಂತೃಪ್ತಗೊಳಿಸುವುದರಲ್ಲಿಯೇ ಸದಾ ಸಂತೋಷಪಡುತ್ತಿದ್ದ ವಿಶಾಲ ಹೃದಯಿಯಾಗಿದ್ದರು. ಪತಿಯೊಡನೆ ಸರ್ವವಿಧದ ಕಷ್ಟ ಸುಖದಲ್ಲಿ ಸಹಭಾಗಿಣಿಯಾಗಿ ಪತಿಗೆ ಚೈತನ್ಯದ ಸ್ಫೂರ್ತಿಯ ಚಿಲುಮೆಯಂತಿದ್ದ ಅನಸೂಯಾದೇವಿಯವರು ದಿ.೨೪.೧.೧೯೮೩ ರಂದು ಶಿವಾಧೀನರಾದರು.

ಡಾ. ಗದ್ದಗಿಮಠ ಅವರ ತಾಯಿಯವರಾದ ಶಿವಗಂಗಾದೇವಿ ಅವರು ತಮ್ಮ ಸ್ನೇಹಿತೆಯರೊಂದಿಗೆ ಶಿವಶರಣರ ಜೀನವ ಚರಿತ್ರೆಯನ್ನು ಕುರಿತು ಅನೇಕ ರೂಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರ ಹಾಡಿನಲ್ಲಿರುವ ನಿರರ್ಗಳ ಶೈಲಿ, ಕಥೆಯ ಬೆಡಗು, ಮಾರ್ದವತೆ, ಮುಂತಾದವುಗಳು ಗದ್ದಗಿಮಠರ ಮನಸ್ಸನ್ನು ಸೆರೆಹಿಡಿದಿರುವುದರಿಂದ ಅವುಗಳನ್ನೆಲ್ಲ ಸಂಗ್ರಹಿಸಿಟ್ಟಿದ್ದಾರೆ. ಹಲವಾರು ವರ್ಷಗಳವರೆಗೆ ಸತತವಾಗಿ ಜಾನಪದ ಸಾಹಿತ್ಯ ಸಂಸ್ಕೃತಿ ಕಲೆಗಳನ್ನು ಸಂಶೋಧನೆ ಕಾರ್ಯಕ್ಕೆ ಅಳವಡಿಸಿ ಪರಿಶೀಲಿಸಿದ್ದಾರೆ. ಈ ಅಪಾರವಾದ ಸಂಕಲನದ ಸವಿರುಚಿಯನ್ನು ಕನ್ನಡಿಗರಿಗೂ ಉಣಬಡಿಸುವ ನಿಮಿತ್ತ ತಾವೇ ಸ್ವತಃ ಜಾನಪದ ಕಾವ್ಯಮಾಲೆಯನ್ನು ಕ್ರಿ.ಶ. ೧೯೫೦ ರಲ್ಲಿ ಪ್ರಾರಂಭಿಸಿ ಅದರ ಮುಖಾಂತರ ನಾಲ್ಕು ಕೃತಿಗಳನ್ನು ಪ್ರಕಟಿಸಿದ್ದಾರೆ.

## ಪ್ರಶಸ್ತಿಗಳು:

ಡಾ. ಗದ್ದಗಿಮಠ ಅವರು ಲಿಂಗರಾಜ ಕಾಲೇಜಿನಲ್ಲಿದ್ದಾಗ Dept. of Horticulture ಪ್ರಶಸ್ತಿಯನ್ನು ಮತ್ತು ಗಾಮಾ ಗುಂಗಾ ಎಂಬ ಕುಸ್ತಿಪಟುಗಳೊಂದಿಗೆ ಕುಸ್ತಿ ಕಣಕ್ಕಿಳಿದು ಕುಂದೆವಾಲಿ ಪೈಲವಾನ್`Body Builder' ಎಂಬ ಬಿರುದುಗಳನ್ನು ಪಡೆದಿದ್ದಾರೆ.

# ಸಾಹಿತ್ಯಸೇವೆ:

ಸರಳ ಸ್ವಭಾವದವರಾದ ಡಾ. ಗದ್ದಗಿಮಠ ಅವರು ನಿರಂತರ ಬರಹಗಾರರು, ದಿನನಿತ್ಯ ಸಾಯಂಕಾಲ ೬ ಗಂಟೆಗೆ ಬರವಣಿಗೆ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಡಾ. ಭೂಸನೂರಮಠ ಅವರು ಮತ್ತು ಎಸ್.ಎಸ್. ಮಾಳವಾಡ ಅವರು ಡಾ. ಗದ್ದಗಿಮಠ ಅವರಿಗೆ Folk-lore ಸಾಹಿತ್ಯ ಸಾಹಿತ್ಯವೇ ಎಂದು ಪದೇ ಪದೇ ಗೇಲಿ ಮಾಡುತ್ತಿದ್ದರೂ ಕೂಡಾ ಸದಾಕಾಲ ಕೊರಳಲ್ಲಿ ಪೇಪರ ಮತ್ತು ಪೆನ್ನುಗಳುಳ್ಳ ಪ್ಯಾಡನ್ನು ಧರಿಸಿ ಸತತವಾಗಿ ಸಂಶೋಧನಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಿದ್ದರು.

ಉದಾರ ಸ್ವಭಾವದವರಾದ ಡಾ. ಗದ್ದಗಿಮಠ ಅವರು ಕಟ್ಟುಮಸ್ತಾದ ಉತ್ತಮ ವ್ಯಕ್ತಿತ್ವವುಳ್ಳವರಾಗಿದ್ದರು. ಸಿರಿಯನ್ನು ಎಂದಿಗೂ ಬೆನ್ನು ಹತ್ತಿದವರಲ್ಲ. ಜಾನಪದ ಸಿರಿ ಸಂಶೋಧನಾ ಕಾರ್ಯದಲ್ಲಿ ಸದಾಕಾಲ ಮಗ್ನರಾಗಿದ್ದು ತಂದೆ ತಾಯಿಗಳ ಪ್ರೇರಣೆಯಿಂದ ಜಾನಪದ ಮಹಾಪ್ರಬಂಧವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ರಚಿಸಿರುವುದರಿಂದ ಈ ಮಹಾಪ್ರಬಂಧವು ಗದ್ದಗಿಮಠ ಅವರ ಕೃತಿಗಳಲ್ಲಿ ಮೇರು ಕೃತಿಯಾಗಿರುತ್ತದೆ. ಅತಿ ಚಿಕ್ಕ ವಯಸ್ಸಿನಲ್ಲಿಯೇ ಹೃದಯಾಘಾತಕ್ಕೆ ಬಲಿಪಶುವಾಗುವ ಪ್ರಸಂಗ ಒದಗಿರುವುದರಿಂದ ಜಾನಪದ ತಜ್ಞರಾದ ಗದ್ದಗಿಮಠ ಅವರಿಗೆ ಮಾರ್ಗದರ್ಶಕರಾಗುವ ಸುವರ್ಣಾವಕಾಶ ಸಿಗದಂತಾಯಿತು. ಇವರ ಅಕಾಲಿಕ ಮರಣದಿಂದಾಗಿ ನಾಣ್ಣುಡಿಗಳನ್ನೊಳಗೊಂಡ ಕೋಶವು ಅರ್ಧಕ್ಕೆ ನಿಲ್ಲುವಂತಾಯಿತು. ಆಕಾಶದಲ್ಲಿಯ ನಕ್ಷತ್ರಗಳ ಆಧಾರದಿಂದ ತಮ್ಮ ಸಾವಿನ ಬಗ್ಗೆ ಗದ್ದಗಿಮಠ ಅವರು ಮೊದಲೆ ಹಲವು ಸಲ ನುಡಿದಿರುವರೆಂಬ ಪ್ರತೀತಿ ಕೂಡ ಅವರ ಮಕ್ಕಳಿಂದ ತಿಳಿದು ಬರುತ್ತದೆ. ಅತ್ಯಂತ ಅಚ್ಚುಕಟ್ಟಾದ ಜೀವನ ನಡೆಸುತ್ತಿದ್ದ ಬಸಯ್ಯನವರು ಅತೀ ಶಿಸ್ತು ಪ್ರಿಯರಾಗಿದ್ದರು.

ದೇವರ ಬಗ್ಗೆ ಅಪಾರ ಭಕ್ತಿವುಳ್ಳವರಾಗಿದ್ದರು. ಕೇವಲ ಇಷ್ಟ ಲಿಂಗಪೂಜಾನಿರತರಾಗಿರುತ್ತಿದ್ದರು. ಯಾವುದೇ ಮಠ ಮಂದಿರಗಳಿಗೆ ಹೋಗುತ್ತಿರಲಿಲ್ಲ. ಸೇವಕರನ್ನು ಸಮಾನ ಭಾವನೆಯಿಂದ ಕಾಣುತ್ತಿದ್ದರು. ಮೇಲು-ಕೀಳು ಜಾತಿ ತಾರತಮ್ಯ ಭಾವನೆಗಳಿಗೆ ಅವಕಾಶ ಕೊಡದೆ ಪ್ರಾಮಾಣಿಕರಾಗಿದ್ದರು. ತಮ್ಮ ಕೆಲಸವನ್ನು ಸ್ವತಃ ತಾವೇ ಮಾಡಿಕೊಳ್ಳುತ್ತಿದ್ದರು.

ಡಾ. ಗದ್ದಗಿಮಠ ಅವರ ನಿತ್ಯ ಆಹಾರ ವಿಧಾನವು ವಿಶೇಷವಾದುದಾಗಿತ್ತು. ಬೀಸಿದ ಹಿಟ್ಟು ಮತ್ತು ಕುಟ್ಟಿದ ಅಕ್ಕಿಯನ್ನು ಊಟಕ್ಕಾಗಿ ಉಪಯೋಗಿಸುತ್ತಿದ್ದರು. ಕಳಲೆಕಾಯಿ, ತೊಟ್ಟಲಕಾಯಿ, ತೊಂಡೆಕಾಯಿ ಇತ್ಯಾದಿಗಳನ್ನು ಊಟದಲ್ಲಿ ಹೆಚ್ಚು ಇಷ್ಟಪಡುತ್ತಿದ್ದರು.

ಉತ್ತರ ಕರ್ನಾಟಕದ ಬಹುಭಾಗವನ್ನೆಲ್ಲ ಸುತ್ತಿ ಜನಸಾಮಾನ್ಯರ ಸಂಪ್ರದಾಯ ಸಂಸ್ಕೃತಿಗಳಲ್ಲಿ ಒಂದಾಗಿ ಹಳ್ಳಿ-ಹಳ್ಳಿಗಳಲ್ಲಿ ಹೇಳ ಹೆಸರಿಲ್ಲದೆ ಅಡಗಿ ಕಾಲಗರ್ಭದಲ್ಲಿ ನಶಿಸಿಹೋಗುತ್ತಿದ್ದ ಜಾನಪದ ಸಾಹಿತ್ಯದ ಅಮೂಲ್ಯ ನಿಧಿಯಂತಿರುವ ಗೀತರತ್ನಗಳನ್ನು ಅಚ್ಚಳಿಯದೆ ಉಳಿಯುವಂತೆ ಸಂಗ್ರಹಿಸಿ ಕೊಟ್ಟ ಶ್ರೇಯಸ್ಸಿನ ಬಹಪಾಲು ಗದ್ದಗಿಮಠ ಅವರಿಗೆ ಸಲ್ಲುತ್ತದೆ. ಡಾ. ಗದ್ದಗಿಮಠ ಅವರ ಮನೆತನವೆ ಇಂತಹ ಜಾನಪದ ಗೀತೆಗಳ ಮಹಾಕೋಶವಾಗಿರುವುದರಿಂದ ಅವರಿಗೆ ಈ ಕಾರ್ಯಕ್ಕಾಗಿ ಸಹಜ ಸ್ಫೂರ್ತಿ ದೊರಕಿದೆ. ಆದ್ದರಿಂದ ಗದ್ದಗಿಮಠ ಅವರು ಅದನ್ನೆ ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡಿದ್ದರು. ಇದಕ್ಕಿಂತ ಮೊದಲು ಗದ್ದಗಿಮಠ ಅವರ ನಾಲ್ಕೈದು ಜಾನಪದ ಗೀತ ಸಂಗ್ರಹಗಳು ಪ್ರಕಟವಾಗಿದ್ದರೂ ಅವುಗಳಿಗೆಲ್ಲಾ ಮೂಲವಾದ ಅವರ ವಿಚಾರಸರಣಿಯನ್ನೊಳಗೊಂಡ ಕನ್ನಡ ಜಾನಪದ ಗೀತೆಗಳು ಗ್ರಂಥದ ಪ್ರಕಟಣೆಯಿಂದ ಈ ಸಾಹಿತ್ಯದ ವಿಶೇಷ ಅಭ್ಯಾಸಕ್ಕೆ ತುಂಬಾ ಸಹಾಯಕ ಕೃತಿಯಾಗಿರುತ್ತದೆ.

ಡಾ. ಗದ್ದಗಿಮಠ ಅವರ ತಂದೆಯವರು ನೂರೊಂದು ಶಿವಶರಣರ ಅಮೂಲ್ಯವಾದ ಹಂತಿಯ ಕಥನಕವನಗಳನ್ನು ಸುಗ್ಗಿಯ ಕಾಲದಲ್ಲಿ ಬೆಳಗಾಗುವವರೆಗೂ ಬಲು ಹುಮ್ಮಸ್ಸಿನಿಂದ ಕೋಚೆತ್ತಿ ಹಾಡುತ್ತಿದ್ದರು. ಆ ಹಾಡುಗಳ ನಿರರ್ಗಳ ಶೈಲಿ, ಕಥೆಯ ಬೆಡಗು, ರಸಪಾಕ, ಮಾರ್ದವತೆ, ನವೀನತೆ ಮೊದಲಾದವುಗಳು ಡಾ. ಗದ್ದಗಿಮಠ ಅವರ ಮನಸ್ಸನ್ನು ಸೆಳೆಯಲಾರಂಭಿಸಿದವು. ಅಂದಿನಿಂದ ಅವುಗಳ ಪ್ರಯೋಜನವನ್ನು ಅರಿತ ಗದ್ದಗಿಮಠ ಅವರು ಬಿಡುವಿನ ವೇಳೆಯಲ್ಲಿ ಜಾನಪದ ಸಿರಿಸಂಪತ್ತನ್ನು ಸಂಗ್ರಹಿಸಲಾರಂಭಿಸಿದರು. ಅವರ ತಂದೆ

ಸಾವಳಿಗಯ್ಯನವರು ಹಂತಿಯ ಪದಗಳಲ್ಲಿ ಹಾಡುವ ಶಿವಶರಣರ ಹಾಡುಗಳನ್ನು ತಾಯಿ ಅನಸುಯಾದೇವಿಯವರು ತಮ್ಮ ಮೂರು ಜನ ಗೆಳತಿಯರೊಡನೆ ವಿವಿಧ ಧಾಟಿಯಲ್ಲಿ ಶಿವಸೊಲ್ಲುಗಳ ಜೊತೆಗೆ ಶ್ರಾವಣ ಮಾಸದಲ್ಲಿ ಹಾಡುತ್ತಿದ್ದರು. ಅಲ್ಲದೆ ಮಹಾಭಾರತ, ರಾಮಾಯಣಗಳ ಪ್ರಸಂಗವನ್ನು ಕುರಿತು ಹಾಡು, ಮಳೆರಾಜನ ಹಾಡು, ಶಿವಶರಣೆ ಚನ್ನಮ್ಮನ ಹಾಡು, ಗುಣಸಾಗರಿಯ ಹಾಡು, ರಡ್ಡೇರ ಅವ್ವಣ್ಣೆವ್ವನ ಹಾಡು ಈ ಮುಂತಾದ ದೊಡ್ಡ ದೊಡ್ಡ ಹಾಡುಗಳನ್ನು ಅನಸೂಯದೇವಿಯವರು ಹಾಡುತ್ತಿದ್ದರು, ಈ ಎಲ್ಲ ಹಾಡುಗಳನ್ನು ಗದ್ದಗಿಮಠ ಅವರು ಅತ್ಯಂತ ಉತ್ಸುಕತೆಯಿಂದ ಸಂಗ್ರಹಿಸುತ್ತಿದ್ದರು.

ಈ ಜಾನಪದ ಹಾಡುಗಳನ್ನು ನರಗುಂದ, ನವಲಗುಂದ, ಶಲವಡಿ, ಬದಾಮಿ, ಕೆರೂರ, ಜಾಲಿಹಾಳ, ನರೇಗಲ್, ಮುಳಗುಂದ, ತೋರಗಲ್ಲು, ಕಡಕೋಳ, ಮುರಗೋಡ, ಬೈಲಹೊಂಗಲ, ವಡಗಾವಿ(ಬೆಳಗಾವಿ), ಗೋಕಾವಿ, ಧಾರವಾಡ, ಹುಬ್ಬಳ್ಳಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಹಿಳೆಯರು ಹಾಡುತ್ತಿರುವ ಪ್ರಸಂಗದಲ್ಲಿ ಆ ಹಾಡುಗಳನ್ನೆಲ್ಲಾ ಕೇಳಿಸಿಕೊಂಡು ಬರೆದುಕೊಂಡು ಸಂಗ್ರಹಿಸಿದ ಶ್ರಮಜೀವಿಗಳು ಡಾ. ಗದ್ದಗಿಮಠ ಅವರು.

ತುಂಬಾ ದೊಡ್ಡದಾಗಿರುವ ಹಾಡುಗಳನ್ನು ಸಂಕಲನ ಮಾಡುವದು ಬಲು ಕಷ್ಟಸಾಧ್ಯವಾಗಿರುವ ಕಾರ್ಯ. ಇದಕ್ಕೆ ತಾಳ್ಮೆ ಅತ್ತವಶ್ಯ. ಹಾಡುಗಳನ್ನು ಹಾಡುವವರು ವಿಶೇಷವಾಗಿ ಅವುಗಳನ್ನು ಕಂಠಪಾಠ ಮಾಡಿರುವದೇ ಹೆಚ್ಚು. ಇಂಥ ಹಾಡುಗಳನ್ನು ಹಾಡುವ ಸಮಯದಲ್ಲಿ ಅಕಸ್ಮಾತ್ಒಂದೊಂದು ನುಡಿಗಳು ಮರೆತರೆ ಹಾಡುವವರಿಗೆ ಇಡೀ ಹಾಡು ನೆನಪಾಗದೆ ಅಷ್ಟಕ್ಕೆ ನಿಂತುಬಿಡುತ್ತಿತ್ತು. ಅಲ್ಲದೆ ಕೆಲವು ಸಲ ಹಾಡು ಬಂದರೂ ಹಾಡು ಹೇಳಲು ಹಲವರು ಒಪ್ಪುವದು ಕಷ್ಟ. ಇಂತಹ ಸಂದರ್ಭದಲ್ಲಿ ಸಾಹಿತ್ಯ ಸಂಕಲನ ಮಾಡುವುದೇ ದುಸ್ತರ. ಕೆಲವೊಮ್ಮೆ ಸಂಕಲನಕಾರರು ಹಾಡುಗಾರರು ಬೇಡಿದಷ್ಟು ಹಣತೆತ್ತು ಹಾಡು ಹೇಳಿಸುವ ಪ್ರಸಂಗವೂ ಬರುತ್ತಿತ್ತು.ಹೀಗೆ ಅನೇಕ ವಿಧದ ಅನುಭವಗಳನ್ನು ಪಡೆದ ಗದ್ದಗಿಮಠ ಅವರು ಬಂದದ್ದಕ್ಕೆ ಟೊಂಕಕಟ್ಟಿ ನಿಂತು ತಮ್ಮ ಆಯುಷ್ಯವನ್ನೇ ಕ್ಷೇತ್ರಕಾರ್ಯದ ನಿಮಿತ್ತ ಮೀಸಲಾಗಿಟ್ಟು ಕಷ್ಟಸಾಧ್ಯವಾದ ಸಂಕಲನ ಕಾರ್ಯವನ್ನುಗೈದು ಜಾನಪದ ಐಸಿರಿಯನ್ನು ಕನ್ನಡ ನಾಡಿಗೆ ಕೊಡುಗೆಯಾಗಿ ಸಲ್ಲಿಸಿರುವ ಅವರ ಸಾಧನೆ ಅವಿಸ್ಮರಣೀಯವಾದುದು.

ಮಹಾಭಾರತ, ರಾಮಾಯಣ, ಶಿವಶರಣರ ಹಂತಿಯ ಹಾಡುಗಳನ್ನು ಪ್ರತ್ಯೇಕವಾಗಿ ಸಂಕಲನ ಮಾಡಿದ್ದಾರೆ. ನಾಲ್ಕು ಮುಗ್ಧ ಶಿವಶರಣರ ಹಂತಿಯ ಹಾಡುಗಳನ್ನು 'ನಾಲ್ಕು ನಾಡ ಪದಗಳು' ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿರುತ್ತಾರೆ. ಅಲ್ಲದೆ ಹೋಳಿಯ ಹಾಡುಗಳು ಎಂಬ ಬಿಡಿ ಪದ್ಯಗಳನ್ನು ದುಂದುಮಿಗಳನ್ನೂ ಪ್ರತ್ಯೇಕವಾಗಿ ಸಂಗ್ರಹಿಸಿದ್ದಾರೆ. ಕಂಬಿಯ ಹಾಡುಗಳು, ಸಂಪ್ರದಾಯದ ಹಾಡುಗಳು, ಸೋಬಾನ ಹಾಡುಗಳು, ಮದುವೆಯ ಹಾಡುಗಳು, ಬೀಸುವ ಹಾಡುಗಳು ಇನ್ನೀತರ ಕೋಲು ಪದಗಳು, ಹಂತಿಯ ಹಾಡುಗಳು ಈ ಮೊದಲಾದ ದೊಡ್ಡ ದೊಡ್ಡದಾಗಿರುವ ಹಾಡುಗಳನ್ನು ಒಂದೆಡೆ ಶೇಖರಿಸಿ ಆ ಸಂಕಲನ ಗುಚ್ಚಕ್ಕೆ 'ಜಾನಪದ ಸಂಭಾರ' ಎಂದು ಕರೆದಿದ್ದಾರೆ. ಶಿವಶರಣರ ಹಂತಿಯ ಹಾಡುಗಳಲ್ಲಿ ಅವರವರ ಚರಿತಾನುಸಾರವಾಗಿ ಹಾಡುಗಳನ್ನು ಕೂಡಿಸಿ, ಕಾಯಕ ಗೀತೆಗಳು, ಸಮರಸ ಗೀತೆಗಳು, 'ಮೂರು ನಾಡಪದಗಳು' ಎಂದು ಅವುಗಳನ್ನು ಕರೆದಿದ್ದಾರೆ. ಅವು ಹಸ್ತಪ್ರತಿರೂಪದಲ್ಲಿರುತ್ತವೆ. ಈ ಎಲ್ಲ ಹಾಡುಗಳನ್ನು ತಮ್ಮ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಸಂದರ್ಭಕ್ಕನುಸಾರವಾಗಿ ಬಳಸಿಕೊಂಡಿದ್ದಾರೆ. ಈ ಗ್ರಂಥವು ಉತ್ತರ ಕರ್ನಾಟಕದ ಜನಜೀವನವನ್ನು ಸಾಧ್ಯವಿದ್ದ ಮಟ್ಟಿಗೆ ಚಿತ್ರಿಸಲು ನೆರವಾದ ಉತ್ಕೃಷ್ಟ ಕೃತಿಯಾಗಿರುತ್ತದೆ. ಜಾನಪದ ಸಾಹಿತ್ಯದಲ್ಲಿ ಡಾ. ಗದ್ದಗಿಮಠ ಅವರಿಗೆ ಅಂತ ಅದಮ್ಯ ಅಭಿರುಚಿ ಹುಟ್ಟಲು ಅವರ ಮಾತಾ ಪಿತರೇ ಮೂಲ ಕಾರಣೀಕರ್ತರೂ ಆಗಿದ್ದಾರೆ.

ಅಪಾರವಾದ ಜಾನಪದ ಸಾಹಿತ್ಯದಲ್ಲಿ ಇಲ್ಲಿಯವರೆಗೆ ಆಗಿರುವ ಕ್ಷೇತ್ರಕಾರ್ಯದ ಕೆಲಸವು ತೀರ ಕಡಿಮೆಯೆಂದೇ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಹಲಸಂಗಿ ಗೆಳೆಯರ ಗುಂಪಿನವರು ಸಂಗ್ರಹಿಸಿದ ಸಾಹಿತ್ಯದ ಹೊರತಾಗಿ ಜಾನಪದ ವಾಙ್ಮಯದ ಸಂಕಲನ ಕಾರ್ಯ ನಿರಂತರವಾಗಿ ನಡೆದುಕೊಂಡು ಬರಬೇಕಾದ ಅಗತ್ಯವಿದೆ. ಹಲಸಂಗಿ ಗೆಳೆಯರ ಗುಂಪಿನವರು ಬಹಳವಾದಿ ಬಿಡಿ ಪದ್ಯಗಳು, ಲಾವಣಿಗಳು ಹಾಗೂ ಹಲಕೆಲವು ಹಾಡುಗಳನ್ನು ಮಾತ್ರ ಸಂಗ್ರಹಿಸಿದ್ದಾರೆ. ದೀರ್ಘವಾದ ಹಾಡುಗಳ ಸಂಗ್ರಹದ ಕೊರೆತೆಯು ಕಂಡುಬರುತ್ತದೆ. ಆ

ಕೊರತೆಯನ್ನು ನೀಗಿಸಿದ ಶ್ರೇಯಸ್ಸು ಡಾ. ಬಿ.ಎಸ್. ಗದ್ದಗಿಮಠ ಅವರದಾಗಿದೆ. ಜಾನಪದ ಛಂದಸ್ಸನ್ನು ಮೊಟ್ಟಮೊದಲು ಬಳಸಿದ ಕೀರ್ತಿಶಾಲಿಗಳು ಆಗಿದ್ದಾರೆ. Classical ನೃತ್ಯದ ಬಗ್ಗೆ ಲೇಖನವನ್ನು ಬರೆದಿದ್ದಾರೆ. ಆದರೆ ಸ್ವತಃ ಅವರು Classical Dance ಮಾಡುತ್ತಿದ್ದಿಲ್ಲ.

## ಜಾನಪದ ಕ್ಷೇತ್ರಕ್ಕೆ ಡಾ. ಗದ್ದಗಿಮಠ ಅವರ ಕೊಡುಗೆಗಳು:

ಡಾ.ಬಿ.ಎಸ್.ಗದ್ದಗಿಮಠ ಅವರು ರಚಿಸಿದ ಕೃತಿಗಳು ಈ ಕೆಳಗಿನಂತಿವೆ.

| | |
|---|---|
| ೧. ನಾಲ್ಕು ನಾಡಪದಗಳು<br>(ಜಾನಪದ ಕಾವ್ಯಮಾಲೆಯ ಮೂಲಕ ಪ್ರಕಟವಾಗಿದೆ). | (೧೯೫೨) |
| ೨. ಕಂಬಿಯ ಹಾಡುಗಳು | (೧೯೫೫) |
| ೩. ಜನತಾ ಗೀತೆಗಳು | (೧೯೫೬) |
| ೪. ಕುಮಾರರಾಮನ ದುಂದುಮೆ ಪದ<br>(ಜನಪದ ಕಾವ್ಯಮಾಲೆಯ ಪ್ರಕಟಣೆ) | (೧೯೫೬) |
| ೫. ಮಲ್ಲಮಲ್ಲಾಣಿ (ಜನಪದ ಕಾವ್ಯಮಾಲೆಯ ಪ್ರಕಟಣೆ) | (೧೯೫೬) |
| ೬. ಲೋಕಗೀತೆಗಳು (ಮೈಸೂರ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಇಲಾಖೆಯ ಪ್ರಕಟಣೆ). | (೧೯೬೦) |
| ೭. ಕನ್ನಡ ಜಾನಪದ ಗೀತೆಗಳು<br>(ಮಹಾಪ್ರಬಂಧ ಕ.ವಿ.ವಿ. ಪ್ರಕಟಣೆ) | (೨೯೬೩) |
| ೮. ಜಾನಪದ ಗೀತೆಗಳು | (೧೯೬೩) |
| ೯. ಗದ್ದಗಿಮಠರ ಬರಹಗಳು (ಮೈ.ವಿ.ವಿ. ಪ್ರಕಟಣೆ) | |
| ‘ಕರ್ನಾಟಕ ಜಾನಪದ ದರ್ಶನ’ ಎಂಬ ಗದ್ದಗಿಮಠ ಅವರು ಇಟ್ಟಿರುವ ಮೂಲ ಹೆಸರನ್ನು ‘ಗದ್ದಗಿಮಠರ ಬರಹಗಳು’ ಎಂದು ಮೈ.ವಿ.ವಿ. ದವರು ಬದಲಾವಣೆ ಮಾಡಿಕೊಂಡಿದ್ದಾರೆ. | |
| ೧೦. ಭಾವಗೀತೆಗಳು | ಅಪ್ರಕಟಿತ ಕೃತಿ. |
| ೧೧. ಮಹಾಭಾರತ | ಅಪ್ರಕಟಿತ ಕೃತಿ. |

ಒಟ್ಟು ಒಂಭತ್ತು ಕೃತಿಗಳು ಪ್ರಕಟವಾಗಿರುತ್ತವೆ. ಲೋಕಗೀತೆಗಳು ಇದು ಉತ್ತಮ ಕವನ ಸಂಕಲನವೆಂದು ಪ್ರಶಸ್ತಿ ಪಡೆದಿರುತ್ತದೆ. ಇವರ ಮೇರು ಕೃತಿ “ಕನ್ನಡ ಜಾನಪದ ಗೀತೆಗಳು”, ಇದು ಗದ್ದಗಿಮಠ ಅವರ ಅಮೂಲ್ಯ ಕೃತಿರತ್ನವಾಗಿರುತ್ತದೆ, ಅಲ್ಲದೆ ಅನೇಕ ಕೃತಿಗಳು ಅಪ್ರಕಟಿತವಾಗಿಯೇ ಉಳಿದಿರುತ್ತವೆ. ಅವು ಈ ಕೆಳಗಿನಂತಿವೆ:

೧. ಜಾನಪದ ಸಂಭಾರ ಭಾಗ-೧

೨. ಜಾನಪದ ಸಂಭಾರ ಭಾಗ-೨

೩. ಶಿವಶರಣರ ಹಂತಿಯ ಹಾಡುಗಳು.

೪. ಜಾನಪದ ಮಹಾಭಾರತ.

೫. ಜಾನಪದ ಭಾವಗೀತೆಗಳು.

೬. ಕಲ್ಯಾಣ ಬಸವನ ಹಾಡು.

೭. ಜಾನಪದ ಶಬ್ದಕೋಶ.

೮. ಕಾಯಕ ಗೀತೆಗಳು.

೯. ಜಾನಪದ ರಾಮಾಯಣ.

೧೦. ನಾಣ್ಣುಡಿಗಳ ಕೋಶ. (ಅರ್ಧವಾಗಿದೆ)

ಈ ಮೊದಲಾದ ಅಮೂಲ್ಯ ಕೃತಿರತ್ನಗಳು ಪ್ರಕಟಿಸುವ ಹೊಣೆಗಾರರನ್ನು ಕಾಯುತ್ತಲಿವೆ.